# ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

## ಮುಕ್ತಗಂಗೋತ್ರಿ, ಮೈಸೂರು–570006

ದಿನಾಂಕ 20/07/2018 ರಂದು 3.30 ಗಂಟೆಗೆ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಆಡಳಿತ ಭವನದ ಮಾನ್ಯ ಕುಲಪತಿಗಳ ಕಛೇರಿಯ ಸಭಾಂಗಣದಲ್ಲಿ ಮಾನ್ಯ ಕುಲಪತಿಗಳಾದ ಪ್ರೊ: ಡಿ.ಶಿವಲಿಂಗಯ್ಯರವರ ಅಧ್ಯಕ್ಷತೆಯಲ್ಲಿ ನಡೆದ 46ನೇ ಶೈಕ್ಷಣಿಕ ಮಂಡಳಿ ಸಭೆಯ ನಡವಳಿ.

| ಉಪಸ್ಥಿತರು | |
|---|---|
| **ಪ್ರೊ. ಡಿ. ಶಿವಲಿಂಗಯ್ಯ**<br>ಮಾನ್ಯ ಕುಲಪತಿಗಳು ಹಾಗೂ<br>ಶೈಕ್ಷಣಿಕ ಮಂಡಳಿಯ ಅಧ್ಯಕ್ಷರು,<br>ಕರಾಮುವಿ, ಮೈಸೂರು. | **ಪ್ರೊ. ಜಗದೀಶ್**<br>ಡೀನ್ (ಶೈಕ್ಷಣಿಕ) ಪ್ರಭಾರ ಹಾಗೂ<br>ಶೈಕ್ಷಣಿಕ ಮಂಡಳಿಯ ಸದಸ್ಯರು, ಕರಾಮುವಿ,<br>ಮೈಸೂರು. |
| **ಡಾ. ಎ. ಖಾದರ್ ಪಾಷಾ**<br>ಕುಲಸಚಿವರು (ಪ್ರಭಾರ) ಮತ್ತು ಹಣಕಾಸು ಅಧಿಕಾರಿಗಳು,<br>ಶೈಕ್ಷಣಿಕ ಮಂಡಳಿ ಸದಸ್ಯ ಕಾರ್ಯದರ್ಶಿಗಳು<br>ಕರಾಮುವಿ, ಮೈಸೂರು. | **ಪ್ರೊ. ಡಿ.ಬಿ. ಬಸವರಾಜ್**<br>ಡೀನ್ (ಅಧ್ಯಯನ ಕೇಂದ್ರಗಳು)<br>ಕರಾಮುವಿ, ಮೈಸೂರು. |
| **ಪ್ರೊ. ಎ. ರಂಗಸ್ವಾಮಿ**<br>ಕುಲಸಚಿವ (ಪರೀಕ್ಷಾಂಗ)<br>ಕರಾಮುವಿ, ಮೈಸೂರು. | **ಪ್ರೊ. ಕೆ.ಜೆ ಸುರೇಶ್,**<br>**ಕಾನೂನು ಸ್ಕೂಲ್ ನಿರ್ದೇಶಕರು,**<br>**ಕರಾಮುವಿ ಮೈಸೂರು.** |
| **ಡಾ॥ ಲಕ್ಷ್ಮಿ.ಎನ್**<br>ಅಧ್ಯಕ್ಷರು, ಶಿಕ್ಷಣ ಶಾಸ್ತ್ರ ವಿಭಾಗ<br>ಕರಾಮುವಿ, ಮೈಸೂರು | - |

46ನೇ ಶೈಕ್ಷಣಿಕ ಮಂಡಳಿ ಸಭೆಗೆ ಹಾಜರಾಗಿದ್ದ ಸದಸ್ಯರುಗಳನ್ನು ಮಾನ್ಯ ಕುಲಪತಿಗಳು ಸ್ವಾಗತಿಸುವುದರೊಂದಿಗೆ ಸಭೆಯು ಪ್ರಾರಂಭವಾಯಿತು. ಮುಂದುವರೆದು ಮಾನ್ಯ ಕುಲಪತಿಗಳು ಮಾತನಾಡುತ್ತಾ ಸಭೆಯನ್ನು ಕರೆದಿರುವ ಉದ್ದೇಶವನ್ನು ಸದಸ್ಯರುಗಳ ಗಮನಕ್ಕೆ ತಂದರು.

20/7 | 20/7

**ಕುಲಸಚಿವರು** | **ಕುಲಪತಿಗಳು**

**ವಿಷಯ ಸಂಖ್ಯೆ: 46:01**

ಯುಜಿಸಿ 2017 ರ ಮಾರ್ಗಸೂಚಿ ಅನ್ವಯ ವಿವಿಯ ಎಲ್ಲಾ ವಿಭಾಗಗಳ ಸಿದ್ಧಪಾಠಗಳು ಸಂರಚನೆಯಾಗುತ್ತಿದ್ದು , ಸದರಿ ಸಿದ್ಧಪಾಠಗಳನ್ನು ಸಂಪಾದಕ ಮಂಡಳಿಯಲ್ಲಿ ಮಂಡಿಸಿ ಅನುಮೋದನೆ ಪಡೆಯುವ ಸಂಬಂಧ ಸಂಪಾದಕ ಮಂಡಳಿಯನ್ನು ಪುನರ್ ರಚಿಸಬೇಕಾಗಿರುತ್ತದೆ. ಸಂಪಾದಕ ಮಂಡಳಿಯನ್ನು ರಚಿಸುವ ಸಂಬಂಧ ದಿನಾಂಕ: 09-01-2018 ರಂದು ನಡೆದ 43ನೇ ಶೈಕ್ಷಣಿಕ ಮಂಡಳಿ ಸಭೆ ಹಾಗೂ ದಿನಾಂಕ: 10-01-2018 ರಂದು ನಡೆದ 149ನೇ ವ್ಯವಸ್ಥಾಪನಾ ಮಂಡಳಿಯ ಸಭೆಯಲ್ಲಿ ಈ ಕೆಳಕಂಡಂತೆ ಸಂಪಾದಕ ಮಂಡಳಿಯು ಅನುಮೋದನೆಯಾಗಿರುತ್ತದೆ.

1. ಸಂಬಂಧಿಸಿದ ಆಯಾ ಸ್ಕೂಲ್ ನಿರ್ದೇಶಕರುಗಳು.
2. ಮಾನ್ಯ ಕುಲಪತಿಗಳು ನಾಮ ನಿರ್ದೇಶನ ಮಾಡುವ ಒಬ್ಬರು ಬಾಹ್ಯ ತಜ್ಞರು.
3. ವಿಭಾಗದ ಹಿರಿಯ ಪ್ರಾಧ್ಯಾಪಕರು.
4. ಆಯಾ ವಿಭಾಗಗಳ ಅಧ್ಯಯನ ಮಂಡಳಿ ಅಧ್ಯಕ್ಷರು.
5. ಆಯಾ ವಿಭಾಗದ ಅಧ್ಯಕ್ಷರುಗಳು ಸದಸ್ಯ ಸಂಪಾದಕರಾಗಿರುತ್ತಾರೆ.

ಮೇಲ್ಕಂಡ ಸಮಿತಿಯಲ್ಲಿ ಕೆಲವು ಹೆಸರುಗಳು ಪುನರಾವರ್ತನೆಯಾಗುವ ಸಂಬವವಿದೆ. ಅದನ್ನು ಹೋಗಲಾಡಿಸಲು ಈ ಕೆಳಕಂಡಂತೆ ಸಮಿತಿಯನ್ನು ಪುನರ್‌ರಚಿಸಲು ಮಾರ್ಪಾಡು ಮಾಡಲಾಗಿದೆ. ಮಾರ್ಪಾಡು ಮಾಡಲ್ಪಟ್ಟ ಸಮಿತಿಯನ್ನು ಮಾನ್ಯ ಕುಲಪತಿಗಳು ದಿನಾಂಕ:22-05-2018 ರಂದು ಅನುಮೋದಿಸಿರುತ್ತಾರೆ.

1. ಸಂಬಂಧಿಸಿದ,ಸ್ಕೂಲ್ ನಿರ್ದೇಶಕರು.
2. ವಿಭಾಗದ ಹಿರಿಯ ಪ್ರಾಧ್ಯಾಪಕರು.
3. ಮಾನ್ಯ ಕುಲಪತಿಗಳು ನಾಮ ನಿರ್ದೇಶನ ಮಾಡುವ ಒಬ್ಬರು ಬಾಹ್ಯ ತಜ್ಞರು.
4. ಆಯಾ ವಿಭಾಗದ ಅಧ್ಯಕ್ಷರುಗಳು ಸದಸ್ಯ ಸಂಚಾಲಕರಾಗಿರುತ್ತಾರೆ.

ಸದರಿ ವಿಷಯವನ್ನು ಅನುಸಮರ್ಥನೆಗಾಗಿ ಶೈಕ್ಷಣಿಕ ಮಂಡಳಿ ಮತ್ತು ವ್ಯವಸ್ಥಾಪನಾ ಮಂಡಳಿ ಸಭೆಗೆ ಮಂಡಿಸಿದೆ.

**ತೀರ್ಮಾನ: ಸ್ವಯಂ ಕಲಿಕಾ ಅಧ್ಯಯನ ಸಾಮಗ್ರಿಗಳಿಗೆ ಪುನರ್ ರಚಿಸಲ್ಪಟ್ಟ ಸಂಪಾದಕ ಮಂಡಳಿಗೆ ಅನುಸಮರ್ಥನೆ ನೀಡಲಾಯಿತು.**

**ಕುಲಸಚಿವರು** 20/7 | **ಕುಲಪತಿಗಳು** 20/7

ವಿಷಯ ಸಂಖ್ಯೆ:46:02

**ವಿಷಯ: ವಿಶ್ವವಿದ್ಯಾನಿಲಯದ ಅಧ್ಯಾಪಕರುಗಳಿಗೆ ಕಾರ್ಯಭಾರ ನಿಗದಿಗೊಳಿಸುವ ಬಗೆಗೆ.**

ವಿಶ್ವವಿದ್ಯಾನಿಲಯದಲ್ಲಿ ಅಧ್ಯಾಪಕರುಗಳು ನಿರ್ವಹಿಸುವ ಕಾರ್ಯಭಾರವನ್ನು ವೈಜ್ಞಾನಿಕವಾಗಿ ನಿಗದಿಪಡಿಸುವುದು ಅಗತ್ಯವಿದೆ. work load ಸಮರ್ಪಕವಾಗಿ ಇಲ್ಲದಿರುವುದರಿಂದ ಪದೇ ಪದೇ ಆಡಿಟ್ ಆಕ್ಷೇಪಣೆಗಳು ಬರುತ್ತಿವೆ. ಸಿದ್ಧಪಾಠಗಳನ್ನು ರಚಿಸುವಾಗ UGC ವೇತನ ಪಡೆಯುವ ಅಧ್ಯಾಪಕರುಗಳು ಹೆಚ್ಚಿನ ಕಾರ್ಯದೊತ್ತಡವನ್ನು ಹೊರಬೇಕಾಗುತ್ತದೆ. ಉಳಿದವುಗಳನ್ನು (ಅಲ್ಪ ಪ್ರಮಾಣ) ಹೊರಗಿನ ಅಧ್ಯಾಪಕರುಗಳಿಗೆ ಹಂಚಿಕೆ ಮಾಡಬೇಕಾಗಿರುತ್ತದೆ. ಆದರೆ ಕೆಲವು ವಿಭಾಗಗಳಲ್ಲಿ ಒಬ್ಬರು ಅಥವಾ ಇಬ್ಬರು ಅಧ್ಯಾಪಕರುಗಳಿದ್ದರೆ ಅಂತಹ ಸಂದರ್ಭದಲ್ಲಿ ಬಾಹ್ಯ ಅಧ್ಯಾಪಕರನ್ನು ಸ್ವಲ್ಪಮಟ್ಟಿಗೆ ಅವಲಂಬಿಸುವುದು ಅನಿವಾರ್ಯವಾಗುತ್ತದೆ. **ಆಡಿಟ್** ಆಕ್ಷೇಪಣೆಗಳನ್ನು ಸರಿದೂಗಿಸುವ ಹಾಗೂ ಅಧ್ಯಾಪಕರುಗಳ ಸೇವೆಯನ್ನು ಸಮರ್ಪಕವಾಗಿ ಉಪಯೋಗಿಸಿ ಗುಣಮಟ್ಟದ SLM ಗಳನ್ನು ರಚಿಸುವ ಹಿನ್ನಲೆಯಲ್ಲಿ ಮಾನ್ಯ ಕುಲಪತಿಗಳು ಡೀನ್(ಶೈ) ರವರ ಅಧ್ಯಕ್ಷತೆಯಲ್ಲಿ ಸಮಿತಿಯೊಂದನ್ನು ರಚಿಸಿದ್ದರು. ಆ ಸಮಿತಿಯು ವರದಿಯನ್ನು ಸಲ್ಲಿಸಿದ್ದು, ಮಾನ್ಯ ಕುಲಪತಿಗಳು ಸದರಿ ವಿಷಯವನ್ನು ಶೈಕ್ಷಣಿಕ ಮಂಡಳಿ ಮತ್ತು ವ್ಯವಸ್ಥಾಪನಾ ಮಂಡಳಿ ಸಭೆಯ ಅನುಮೋದನೆ ಪಡೆಯುವುದು ಅವಶ್ಯವೆಂದು ಆದೇಶಿಸಿರುವುದರಿಂದ, ವಿಷಯವನ್ನು ಸಭೆಗೆ ಮಂಡಿಸಿದೆ. ಅಗತ್ಯ ಅನುಮೋದನೆ ಕೋರಿದೆ.

**<u>ತೀರ್ಮಾನ</u>: Statute framed under section 23(2) of the Karnataka Open University Act 1994 Statute relating to extension of UGC Pay Scales as revised from 01.01.1996 to University teachers 1996 ಲ್ಲಿರುವ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಅಧ್ಯಾಪಕರ ಕಾರ್ಯಭಾರ ನಿಗಧಿಗೊಳಿಸುವ ಅಗತ್ಯತೆ ಬಗ್ಗೆ ಚರ್ಚಿಸಲಾಯಿತು. ವಿಶ್ವವಿದ್ಯಾನಿಲಯದಲ್ಲಿ ಅಧ್ಯಾಪಕರ ಕಾರ್ಯಭಾರ ಇವರಗೆ ಆಗಿಲ್ಲದೆ ಇರುವುದರಿಂದ ಆಡಿಟ್ ಆಕ್ಷೇಪಣೆ ಪ್ರತಿ ವರ್ಷ ಬರುತ್ತಿರುವುದನ್ನು ಪರಿಗಣಿಸಿ ವೈಜ್ಞಾನಿಕವಾಗಿ ಮಾಡಿದರೆ ಆಡಿಟ್ ಆಕ್ಷೇಪಣೆ ಕಡಿಮೆ ಮಾಡುವುದರ ಜೊತೆಗೆ ಆಂತರಿಕ ಅಧ್ಯಾಪಕರುಗಳ ನೈಪೂಣ್ಯತೆಯನ್ನು ಪರಿಣಾಮಕಾರಿಯಾಗಿ ಉಪಯೋಗಿಸಿಕೊಳ್ಳುವ ಸಲುವಾಗಿ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.**

ವಿಷಯ ಸಂಖ್ಯೆ: 46:03

**ವಿಷಯ: ವಿಶ್ವವಿದ್ಯಾನಿಲಯದಲ್ಲಿರುವ SLM ಗಳಿಗೆ ಪೂರಕ ಸಾಮಗ್ರಿಗಳನ್ನು ಅಳವಡಿಸುವ ಬಗೆಗೆ.**

2017ರ ಆಕ್ಟೋಬರ್ ದೂರಶಿಕ್ಷಣ ನಿಯಮಗಳ ಪ್ರಕಾರ ವಿಶ್ವವಿದ್ಯಾನಿಲಯವು 2018-19 ನೇ ಸಾಲಿನಿಂದ ಆರಂಬಿಸುವ ಶೈಕ್ಷಣಿಕ ಕಾರ್ಯಕ್ರಮಗಳಿಗೆ SLM ಗಳನ್ನು ಸಿದ್ಧಪಡಿಸಬೇಕಾಗುತ್ತದೆ. ಅದಕ್ಕೆ ಪೂರಕವಾಗಿ

2017 2017

ಕುಲಸಚಿವರು ಕುಲಪತಿಗಳು

ಪ್ರತಿಶಿಕ್ಷಣ ಕ್ರಮದಲ್ಲಿನ ಪ್ರತಿ ಕೋರ್ಸ್‌ಗೆ 2 ಬ್ಲಾಕ್ ಗಳನ್ನು ಕ್ರಮಬದ್ಧವಾಗಿ **SLM** ಗಳನ್ನು ಮಾಡಿಸಲಾಯಿತು. ಇನ್ನುಳಿದ ಬ್ಲಾಕ್ ಗಳ **SLM** ಗಳನ್ನು ಸಿದ್ಧಪಡಿಸಲು ಸಮಯ ಹೆಚ್ಚು ಬೇಕಾಗಿರುತ್ತದೆ. ಅಲ್ಲದೆ ವೆಚ್ಚವು ಸಹ ಆಗುತ್ತದೆ ಎಂಬುದನ್ನು ಅಭಿಪ್ರಾಯ ಪಡೆಯಲಾಯಿತು. ವಿಶ್ವವಿದ್ಯಾನಿಲಯದ ಸಿದ್ಧಪಾಠ ವಿಭಾಗದಲ್ಲಿ ಮುದ್ರಣಗೊಂಡಿರುವ (ಶೇ.೬೦ ರಷ್ಟು **SLM** ರೂಪದಲ್ಲಿರುವಂತಹ) **SLM** ಗಳನ್ನು ಸದ್ಬಳಕೆ ಮಾಡಿಕೊಳ್ಳುವ ಉದ್ದೇಶದಿಂದ ಪೂರಕ **SLM** ಸಾಮಗ್ರಿಗಳನ್ನು ವಿದ್ಯಾರ್ಥಿಗಳಿಗೆ ವಿತರಿಸಲು ಮಾನ್ಯ ಕುಲಪತಿಗಳು ಆದೇಶಿಸಿರುತ್ತಾರೆ. ಅದರಂತೆ ಮುಂದಿನ ಕ್ರಮಗಳನ್ನು ಕೈಗೊಳ್ಳಲಾಗಿದೆ. ಈಗಾಗಲೆ ವಿಭಾಗದ ಅಧ್ಯಕ್ಷರು ಮತ್ತು ಅಧ್ಯಾಪಕರುಗಳು ಪೂರಕ ಅಧ್ಯಯನ ಸಾಮಗ್ರಿಗಳನ್ನು ಸಿದ್ಧಪಡಿಸುತ್ತಿದ್ದಾರೆ.

ಸದರಿ ವಿಷಯವನ್ನು ಶೈಕ್ಷಣಿಕ ಮಂಡಳಿ ಸಭೆಗೆ ಮಾನ್ಯ ಕುಲಪತಿಗಳು ಆದೇಶಿಸಿರುವುದರಿಂದ ಅಗತ್ಯ ಅನುಮೋದನೆ ಕೋರಿದೆ

**<u>ತೀರ್ಮಾನ:</u> 2017 ದೂರ ಶಿಕ್ಷಣ ನಿಯಮಗಳ ಪ್ರಕಾರ ಎಸ್.ಎಲ್.ಎಂ. ಗಳನ್ನು ಸಿದ್ಧಪಡಿಸಬೇಕಾಗಿದೆ. ವಿ.ವಿ. ಯಲ್ಲಿ ಈಗಾಗಲೇ ಲಭ್ಯವಿರುವ ಅಧ್ಯಯನ ಸಾಮಗ್ರಿಗಳನ್ನು ಸದುಪಯೋಗ ಪಡಿಸಿಕೊಳ್ಳುವ ಸಲುವಾಗಿ ಹಳೆಯ ಎಸ್.ಎಲ್.ಎಂ.ಗಳು ವ್ಯತ್ಯಯ ಇದ್ದಲ್ಲಿ ಪೂರಕ ಅಧ್ಯಯನ ಸಾಮಗ್ರಿಗಳನ್ನು ಶೈಕ್ಷಣಿಕ ವಿಭಾಗಗಳು ಸಿದ್ಧಪಡಿಸಿಕೊಳ್ಳುವ ಕ್ರಮವನ್ನು ಅನುಮೋದಿಸಿತು.**

**ವಿಷಯ ಸಂಖ್ಯೆ: 46:04**

ಯುಜಿಸಿ 2017 ರ ಮಾರ್ಗಸೂಚಿ ಅನ್ವಯ PPR ಗಳನ್ನು ಸಿದ್ಧಪಡಿಸಿ ವಿವಿ ನಿಲಯವು ಯುಜಿಸಿ ಗೆ ಏಪ್ರಿಲ್ 2018 ರಲ್ಲಿ ಕಳುಹಿಸಿಕೊಡಲಾಗಿತ್ತು. PPR ಗಳಲ್ಲಿ ವಿ.ವಿ.ಯು ಸ್ವ-ಕಲಿಕಾ ಸಾಮಗ್ರಿಗಳ ಬಗ್ಗೆ ವಿದ್ಯಾರ್ಥಿಗಳಿಂದ ಮತ್ತು Academic Peer ನಿಂದ Feed back ನ್ನು ಪಡೆಯಲಾಗುತ್ತದೆ ಎಂದು ತಿಳಿಸಲಾಗಿದೆ. ಅಲ್ಲದೆ ಸಂಪರ್ಕ ಕಾರ್ಯಕ್ರಮ / ಸಮಾಲೋಚನೆ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು ತಾವು ಕಲಿತ ಪಾಠ ಪ್ರವಚನದ ಬಗ್ಗೆ Feed back ನ್ನು ಸಹ ಅಳವಡಿಸಿಕೊಂಡಿದೆ ಎಂದು ತಿಳಿಸಿದೆ. ಅದರಂತೆ ಈ ಕೆಳಕಂಡ ನಮೂನೆಗಳನ್ನು ಸಿದ್ಧಪಡಿಸಲಾಗಿದೆ.

1. Teacher Assessment by Student (UG)
2. Teacher Assessment by Student (PG)
3. Student Feed back on Self Learning Material
4. Academic Peer Review on SLM Content

**<u>ತೀರ್ಮಾನ:</u> 2017 ದೂರ ಶಿಕ್ಷಣ ನಿಯಮಾವಳಿ ಪ್ರಕಾರ ಮೇಲ್ಕಂಡ ಎಲ್ಲಾ ನಮೂನೆಗಳು ಅತ್ಯವಶ್ಯಕವಾಗಿದೆಂದು ಮನಗಂಡು ಅವುಗಳನ್ನು ಅನುಷ್ಠಾನಗೊಳಿಸಲು ತೀರ್ಮಾನಿಸಲಾಯಿತು.**

ಕುಲಸಚಿವರು — ಕುಲಪತಿಗಳು

**ವಿಷಯ ಸಂಖ್ಯೆ: 46:05**

**ವಿಷಯ: ಡೀನ್(ಶೈಕ್ಷಣಿಕ) ವಿಭಾಗದಲ್ಲಿ SLM ಪುನರ್ ಸಂರಚನೆಯ ಬಗ್ಗೆ ಕೈಗೊಂಡಿರುವ ಕ್ರಮಗಳ ವರದಿ.**

ವಿಶ್ವವಿದ್ಯಾನಿಲಯವು ಈ ಹಿಂದೆ ಇದ್ದಂತಹ ಎಲ್ಲಾ ಕಾರ್ಯಕ್ರಮಗಳಿಗೆ ಯುಜಿಸಿ ಮಾನ್ಯತೆ ಪಡೆಯುವ ಸಲುವಾಗಿ 2017-18 ನೇ ಸಾಲಿನಲ್ಲಿ ಯುಜಿಸಿ 2017 ರ ನಿಯಮಾವಳಿ ಪ್ರಕಾರ **SLM** ಪುನರ್ ಸಂರಚನೆಯು ಬಹುಮುಖ್ಯವಾಗಿತ್ತು. ಅದನ್ನು ಅನುಷ್ಠಾನಗೊಳಿಸಲು ಆದ್ಯತೆಯ ಮೇರೆಗೆ ಕೈಗೆತ್ತಿಕೊಳ್ಳಲಾಯಿತು. ಹಾಲಿ ವಿಶ್ವವಿದ್ಯಾನಿಲಯದಲ್ಲಿ ಮುದ್ರಣಗೊಂಡಿರುವ **SLM** ಗಳನ್ನು ಸದುಪಯೋಗಪಡಿಸಿಕೊಳ್ಳಲು ಪುನರ್ ಸಂರಚನೆ ಮಾಡುವುದು ಸೂಕ್ತ ಎಂದು ಭಾವಿಸಿ, ದಿನಾಂಕ:17-08-2017 ರಿಂದ 17-04-2018 ರವರೆಗೆ ಎಲ್ಲಾ ವಿಭಾಗದ ಅಧ್ಯಾಪಕರುಗಳಿಗೆ ತರಬೇತಿ ನೀಡಲಾಯಿತು. ಅದರಂತೆ ಎಲ್ಲಾ ವಿಭಾಗಗಳು, ಗಣಿತಶಾಸ್ತ್ರ, ಸಂಸ್ಕೃತ, ಉರ್ದು, ತೆಲುಗು ಸೇರಿದಂತೆ, ವಹಿಸಿದ ಕೆಲಸವನ್ನು ನಿರ್ವಹಿಸಿದವು.ಆದರೆ ಹಿಂದಿ ವಿಭಾಗವು **SLM** ರೂಪದಲ್ಲಿ ಸಲ್ಲಿಸುವ ಬದಲು ಹಳೆಯ ಅಧ್ಯಯನ ಸಾಮಗ್ರಿಗಳನ್ನೇ ಕೈ ಬರಹದಲ್ಲಿ ಸಲ್ಲಿಸಿರುತ್ತಾರೆ. (ವರದಿಯ ಪ್ರತಿಯನ್ನು ಅನುಬಂಧ-ಅ ನಲ್ಲಿ ಲಗತ್ತಿಸಿದೆ.)

**<u>ತೀರ್ಮಾನ:</u> ಆಗಸ್ಟ್-2017 ರಿಂದ ಜೂನ್-2018ರವರೆಗೆ ಎಸ್.ಎಲ್.ಎಂ. ಪುನರ್-ಸಂರಚನೆ ಬಗ್ಗೆ ತೆಗೆದುಕೊಂಡಿರುವ ಎಲ್ಲಾ ಕ್ರಮಗಳನ್ನು ಶೈಕ್ಷಣಿಕ ಮಂಡಳಿ ಗಮನಿಸಿತು. ಕೈಗೊಂಡ ಕ್ರಮಗಳ ಬಗ್ಗೆ ಅನುಮೋದನೆ ನೀಡಿತು.**

ವಿಷಯ ಸಂಖ್ಯೆ 46:06

ವಿಷಯ : Information Technology ಅಧ್ಯಯನ ವಿಭಾಗವನ್ನು Information Science ಎಂಬುದಾಗಿ ಬದಲಾಯಿಸುವುದು ಹಾಗೂ ಹಾಲಿ ಮಂಜೂರಾಗಿರುವ ಹುದ್ದೆಯನ್ನು ವರ್ಗಾವಣೆ ಮಾಡುವ ಬಗೆಗೆ.

*****

2018-19ನೇ ಸಾಲಿನ ಪ್ರವೇಶಾತಿಗೆ ಯು.ಜಿ.ಸಿ. ಮಾನ್ಯತೆ ದೊರೆಯುವ ನಿರೀಕ್ಷೆಯಲ್ಲಿದ್ದು, ಈ ಸಂಬಂಧ ಪ್ರವೇಶಾತಿ ವಿವರಣಾ ಪುಸ್ತಕಗಳನ್ನು ಮುದ್ರಿಸುವ ಸಂದರ್ಭದಲ್ಲಿ Information Technology ಅಧ್ಯಯನ ವಿಭಾಗಕ್ಕೆ ಸಂಬಂಧಿಸಿದಂತೆ ಕೆಳಕಂಡಂತೆ ಬದಲಾವಣೆಗಳಾಗಬೇಕಿರುತ್ತದೆ.

- ಯು.ಜಿ.ಸಿ, ನವದೆಹಲಿ, ಇವರು "Technology" ಎಂಬ ಪದವನ್ನು ಯಾವುದೇ ವಿಷಯಗಳನ್ನು ನಡೆಸುವಂತಿಲ್ಲವೆಂದು ನಿರ್ದೇಶಿಸಿರುತ್ತದೆ.
- Department of Information Technology ವಿಭಾಗದ ವತಿಯಿಂದ ನಡೆಸಲಾಗುತ್ತಿರುವ M.Sc Information Technology ವಿಷಯವನ್ನು M.Sc Information Science ಎಂದು ಬದಲಾವಣೆ ಮಾಡಿಕೊಳ್ಳುವ ಬಗ್ಗೆ BOS in Information Technology ಯಿಂದ ಒಪ್ಪಿಗೆ ಪಡೆದು, ಈ ವಿಷಯವನ್ನು ದಿನಾಂಕ: 14.09.2017 ರಂದು ನಡೆದ 147ನೇ (147.24) ವ್ಯವಸ್ಥಾಪನಾ ಮಂಡಳಿ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯಲಾಗಿರುತ್ತದೆ. ಮುಂದುವರೆದು. ಯು.ಜಿ.ಸಿ. ಗೆ ಸಲ್ಲಿಸಿರುವ ಪಿ.ಪಿ.ಆರ್. ನಲ್ಲೂ ಸಹ M.Sc Information Technology ವಿಷಯವನ್ನು M.Sc Information Science ಎಂದು ಬದಲಾಯಿಸಿರುವ ಬಗ್ಗೆ ಮಾಹಿತಿಯನ್ನು ನೀಡಲಾಗಿರುತ್ತದೆ ಹಾಗೂ ಸಿದ್ಧಪಾಠದಲ್ಲೂ ಸಹ ಈ ಬದಲಾವಣೆಯನ್ನು ಮಾಡಲಾಗಿರುತ್ತದೆ.

**ಕುಲಸಚಿವರು** **ಕುಲಪತಿಗಳು**

- ಪ್ರಸ್ತುತ Department of Information Technology ವಿಭಾಗದ ಹೆಸರು ಬದಲಾವಣೆಯಾಗ ಬೇಕಿರುತ್ತದೆ. ಈ ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಹಾಯಕ ಪ್ರಾಧ್ಯಾಪಕರು ಕೆಳಕಂಡಂತಿರುತ್ತಾರೆ.

| Sl. No | Name | Existing Dept. Name | Proposed Dept. Name |
|---|---|---|---|
| 1 | **Smt. Rashmi B.S**<br>Asst. Professor & Chairperson | Information Technology | DoS in Information Science |
| 2 | **Kum. Nandini H.M**<br>Assistant Professor | Information Technology | DoS in Information Science |

- **ಮೇಲ್ಕಂಡವರುಗಳ ನೇಮಕಾತಿಯನ್ನು Department of Information Technology ವಿಭಾಗಕ್ಕೆ ಮಾಡಲಾಗಿರುತ್ತದೆ. ಪ್ರಸ್ತುತ ಈ ವಿಭಾಗವನ್ನು <u>DoS in Information Science</u> ಎಂಬುದಾಗಿ ಬದಲಾವಣೆಮಾಡಿ ಸದರಿಯವರುಗಳ ಸೇವಾ ಪುಸ್ತಕಗಳಲ್ಲೂ ಸಹ ಈ ಮಾಹಿತಿಯನ್ನು ದಾಖಲಿಸಬೇಕಿರುತ್ತದೆ.**
- ಯು.ಜಿ.ಸಿ. ಯು ಪ್ರತಿ ಅಧ್ಯಯನ ವಿಭಾಗದಲ್ಲಿ ಕನಿಷ್ಠ Professor-1, Associate Professor-1 & Assistant Professor-2 ಹುದ್ದೆಗಳು ಇರಬೇಕೆಂದು ನಿಗಧಿಪಡಿಸಿರುತ್ತದೆ. ಪ್ರಸ್ತುತ ವಿವಿ ನಿಲಯವು "Statues relating to the creation of additional posts in Karnataka State Open University – 2017" ಪರಿನಿಯಮವನ್ನು ರಚಿಸಿಕೊಂಡಿದ್ದು ಇದರಲ್ಲಿ DoS in Computer Science ವಿಭಾಗಕ್ಕೆ Professor – 01, Associate Professor – 01 ಹುದ್ದೆಗಳನ್ನು ನಿಗಧಿಪಡಿಸಲಾಗಿರುತ್ತದೆ. ಮುಂದುರೆದು, ಈ ಪರಿನಿಯಮದ ಕೆಳಕಂಡ Clause No.6 ದ ಪ್ರಕಾರ ಕಾರ್ಯೋದೊತ್ತಡಕ್ಕೆ ಅನುಗುಣವಾಗಿ ಹುದ್ದೆಗಳನ್ನು ವರ್ಗಾವಣೆ ಮಾಡಿಕೊಳ್ಳಲು ಅವಕಾಶವಿರುವ ಹಿನ್ನೆಲೆಯಲ್ಲಿ DOS in Computer Science ವಿಭಾಗಕ್ಕೆ ಒಂದು ಹುದ್ದೆಯನ್ನು ವರ್ಗಾವಣೆ ಮಾಡಿಕೊಡಬೇಕಿರುತ್ತದೆ.

  *<u>Clause 6: "Allocation of Posts:</u> Not withstanding anything contained in this Statute, the posts created under this Statute shall be allocated by the University to any of its department based on the work load, students strength, requirement of UGC and other relevant consideration".*

**ತೀರ್ಮಾನ: Information Science ವಿಭಾಗದ ಮುಖ್ಯಸ್ಥರ ಪ್ರಸ್ತಾವನೆ ಮತ್ತು BOS ಶಿಫಾರಸ್ಸುಗಳ ಬಗ್ಗೆ ಗಮನಿಸಲಾಯಿತು, ಮತ್ತು ಅದಕ್ಕೆ ಅನುಮೋದನೆ ನೀಡಲಾಯಿತು.**

**ವಿಷಯ ಸಂಖ್ಯೆ:46:07**

ವಿಷಯ : UGC(ODL) ನಿಯಮ 2017 ರ ಅನ್ವಯ ವಿಶ್ವವಿದ್ಯಾನಿಲಯದ ಇನ್ ಹೌಸ್ ಶಿಕ್ಷಣ ಕ್ರಮಗಳಿಗೆ CBCS ನ್ನು ಜಾರಿಗೊಳಿಸುವ ನಿಟ್ಟಿನಲ್ಲಿ ಸಿದ್ಧಪಡಿಸಿರುವ ಕರಡು ಅಧ್ಯಾದೇಶವನ್ನು ರಚಿಸಿರುವ ಕುರಿತು.

********

ವಿಶ್ವವಿದ್ಯಾನಿಲಯದ ಧನ ಸಹಾಯ ಆಯೋಗವು ದೇಶದಲ್ಲಿನ ಎಲ್ಲಾ ಮುಕ್ತ ವಿಶ್ವವಿದ್ಯಾನಿಲಯಗಳ ಕಾರ್ಯ ಚಟುವಟಿಕೆಗಳಲ್ಲಿ ಏಕರೂಪತೆ ತರುವ ಹಾಗೂ ನಿಯಂತ್ರಿಸುವ ನಿಟ್ಟಿನಲ್ಲಿ **UGC (Open and Distance**

ಕುಲಸಚಿವರು 2017 ಕುಲಪತಿಗಳು 2017

**Learning) Regulations 2017** ಮೂಲಕ ಮಾರ್ಗ ಸೂಚಿಯನ್ನು ರೂಪಿಸಿದ್ದು ಅದರಂತೆ ಮುಕ್ತ ವಿಶ್ವವಿದ್ಯಾನಿಲಯವು ಕಾರ್ಯ ನಿರ್ವಹಿಸ ಬೇಕಿರುತ್ತದೆ.

ಈ ನಿಟ್ಟಿನಲ್ಲಿ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು ಕ್ರಮ ವಹಿಸುತ್ತಾ 2019-20ನೇ ಶೈಕ್ಷಣಿಕ ಸಾಲಿನಿಂದ ತನ್ನ ಎಲ್ಲಾ ಇನ್ ಹೌಸ್ ಶಿಕ್ಷಣ ಕ್ರಮಗಳಲ್ಲಿ **CBCS** ಕ್ರಮಗಳನ್ನು ಅನುಸರಿಸುವ ನಿಟ್ಟಿನಲ್ಲಿ ಮಾರ್ಗಸೂಚಿಗಳನ್ನೊಳಗೊಂಡ ಕರಡು ಅಧ್ಯಾದೇಶವನ್ನು **(Regulations)** ಸಿದ್ಧಪಡಿಸಿದ್ದು ಈ ಕರಡು ಅಧ್ಯಾದೇಶಕ್ಕೆ ಅನುಮೋದನೆ ಪಡೆಯುವ ನಿಟ್ಟಿನಲ್ಲಿ ಶೈಕ್ಷಣಿಕ ಮಂಡಳಿಯ ಸಭೆಗೆ ಚರ್ಚೆ ಹಾಗೂ ನಿರ್ಣಯಕ್ಕಾಗಿ ವಿಷಯ ಮಂಡಿಸಿದೆ.

**<u>ತೀರ್ಮಾನ:</u> ಯು.ಜಿ.ಸಿ ಯು ಸಿ.ಬಿ.ಸಿ.ಎಸ್ ಅನ್ನು ದೂರ ಶಿಕ್ಷಣ ವ್ಯವಸ್ಥೆಯಲ್ಲಿಯೂ ಕೂಡಾ ಕಡ್ಡಾಯವಾಗಿ ಅಳವಡಿಸಿಕೊಳ್ಳಬೇಕೆಂಬ ನಿರ್ದೇಶನವನ್ನು 45ನೇ ಶೈಕ್ಷಣಿಕ ಮಂಡಳಿಯಲ್ಲಿ ಗಮನಿಸಿ ಅದಕ್ಕೆ ತಾತ್ವಿಕ ಒಪ್ಪಿಗೆ ನೀಡಲಾಗಿತ್ತು. ಸ್ನಾತಕೋತ್ತರ ಶಿಕ್ಷಣ ಕ್ರಮಗಳಿಗೆ ಸಿ.ಬಿ.ಸಿ.ಎಸ್ ಅನ್ನು 2019-2020 ರಿಂದ ಪ್ರಾರಂಭಿಸುವ ನಿಟ್ಟಿನಲ್ಲಿ ಸಿದ್ಧಪಡಿಸಲ್ಪಟ್ಟ ಕರಡು Template ಮತ್ತು ನಿಯಮಗಳನ್ನು ಪರಿಶೀಲಿಸಲಾಯಿತು. ಮತ್ತು ಅಗತ್ಯ ಮಾರ್ಪಾಡುಗಳೊಂದಿಗೆ ಅನುಷ್ಠಾನಗೊಳಿಸಲು ಅನುಮೋದನೆ ನೀಡಲಾಯಿತು.**

**ವಿಷಯ ಸಂಖ್ಯೆ: 46:08**

**ವಿಷಯ** : ವಿವಿ ನಿಲಯದ 'ವಿದ್ಯಾರ್ಥಿ ಸಹಾಯ ಕೇಂದ್ರ' (Learner Support Centre) / ಅಧ್ಯಯನ ಕೇಂದ್ರ (Study Centre) ಗಳನ್ನು ಅನುಮೋದನೆ ಪಡೆಯುವ ಬಗೆಗೆ.

*****

ವಿಶ್ವವಿದ್ಯಾನಿಲಯ ಧನ ಸಹಾಯ ಆಯೋಗ ರೂಪಿಸಿರುವ ಮುಕ್ತ ಮತ್ತು ದೂರ ಶಿಕ್ಷಣ ನಿಯಮಾವಳಿ - 2017ನ್ನು ಆಧರಿಸಿ ಕರಾಮುವಿಯು ಒಟ್ಟು 75 'ವಿದ್ಯಾರ್ಥಿ ಸಹಾಯ ಕೇಂದ್ರ' (Learner Support Centre) / ಅಧ್ಯಯನ ಕೇಂದ್ರ (Study Centre) ಗಳನ್ನು ಗುರುತಿಸಿದೆ. ಇವುಗಳಲ್ಲಿ ಸಾಮಾನ್ಯ ಅಧ್ಯಯನ ಕೇಂದ್ರಗಳು ಅರವತ್ತೈದು ಮತ್ತು ಬಿ.ಎಡ್ ಅಧ್ಯಯನ ಕೇಂದ್ರಗಳು ಹತ್ತು. (ಪಟ್ಟಿ ಲಗತ್ತಿಸಿದೆ).

'ವಿದ್ಯಾರ್ಥಿ ಸಹಾಯ ಕೇಂದ್ರ'ಗಳ ಗುರುತಿಸುವಿಕೆಗಾಗಿ ವಿಶ್ವವಿದ್ಯಾನಿಲಯವು ಒಂದು ಸಮಿತಿಯನ್ನು ರಚಿಸಿದ್ದು, ಸದರಿ ಸಮಿತಿಯು ಸಭೆಗಳನ್ನು ನಡೆಸಿ ಚರ್ಚಿಸಿದೆ. ರಾಜ್ಯದ ಸರ್ಕಾರಿ ಪದವಿ ಕಾಲೇಜುಗಳಲ್ಲಿ ಅಧ್ಯಯನ ಕೇಂದ್ರಗಳನ್ನು ತೆರೆಯಲು ಮತ್ತು ಸಂಬಂಧಿತ ಸಹಕಾರ ನೀಡಲು, ಆಯ್ದ 50 ಸರ್ಕಾರಿ ಕಾಲೇಜುಗಳ ಪ್ರಾಂಶುಪಾಲರಿಗೆ ನಿರ್ದೇಶನ ನೀಡುವಂತೆ ಕಾಲೇಜು ಶಿಕ್ಷಣ ಆಯುಕ್ತರಿಗೆ ಮಾನ್ಯ ಕುಲಪತಿಗಳು ಪತ್ರದಲ್ಲಿ ಕೋರಿದ್ದರು. ಈ ಸಂಬಂಧ ಕಾಲೇಜುಗಳಿಗೆ ಕಾಲೇಜು ಶಿಕ್ಷಣ ಇಲಾಖೆ ಆಯುಕ್ತರಿಂದ ಪತ್ರ ರವಾನೆಯಾಗಿತ್ತು. ಕಾಲೇಜುಗಳಿಂದ ಬಂದ ಪತ್ರದಲ್ಲಿ ಕೇವಲ 15 ಕಾಲೇಜುಗಳು ಮಾತ್ರ ಅಧ್ಯಯನ ಕೇಂದ್ರ ಸ್ಥಾಪನೆ ಮಾಡಲು ಅನುಮತಿ ನೀಡಿರುತ್ತವೆ.

**ಕುಲಸಚಿವರು** 20/7

**ಕುಲಪತಿಗಳು** 20/7

ಅಗತ್ಯ ಸಂಖ್ಯೆಯ ಸರ್ಕಾರಿ ಕಾಲೇಜುಗಳು ನಮಗೆ ಲಭ್ಯವಾಗದ ಕಾರಣ ಈ ಹಿಂದೆ ನಮ್ಮ ವಿಶ್ವವಿದ್ಯಾನಿಲಯದ ಅಧ್ಯಯನ ಕೇಂದ್ರಗಳಾಗಿ ಕಾರ್ಯನಿರ್ವಹಿಸುತ್ತಿದ್ದ (ಪ್ರಸ್ತುತ ತಾತ್ಕಾಲಿಕವಾಗಿ ರದ್ದಾಗಿರುವ) ಕೆಲವು ಅಧ್ಯಯನ ಕೇಂದ್ರಗಳನ್ನು, ಅಲ್ಲದೆ ಅಧ್ಯಯನ ಕೇಂದ್ರ ಸ್ಥಾಪಿಸಲು ಒಪ್ಪಿಗೆ ನೀಡಿರುವ ಖಾಸಗಿ ಕಾಲೇಜುಗಳನ್ನು ಗಮನದಲ್ಲಿರಿಸಿಕೊಂಡು ಕಾಲೇಜುಗಳನ್ನು ಗುರುತಿಸಿ ಆಯ್ಕೆ ಮಾಡಲಾಗಿದೆ.

ವಿದ್ಯಾರ್ಥಿಗಳಿಗೆ ವಾರಾಂತ್ಯ ಸಮಾಲೋಚನೆ / ಸಂಪರ್ಕ ಕಾರ್ಯಕ್ರಮ ಮೊದಲುಗೊಂಡು ಎಲ್ಲ ಬಗೆಯ ಶೈಕ್ಷಣಿಕ ಚಟುವಟಿಕೆಗಳಿಗೆ ಅನುಕೂಲಗಳನ್ನು ಕಲ್ಪಿಸುವ ಗುರುತರ ಜವಾಬ್ದಾರಿ ಹೊಂದಿರುವ ಈ ಅಧ್ಯಯನ ಕೇಂದ್ರಗಳ ಗುರುತಿಸುವಿಕೆಯಲ್ಲಿ

- ರಾಜ್ಯದ ಭೌಗೋಳಿಕ ವ್ಯಾಪ್ತಿ,
- ಜಿಲ್ಲಾವಾರು ಪ್ರಾತಿನಿಧ್ಯ,
- ಹಿಂದಿನ ಶೈಕ್ಷಣಿಕ ವರ್ಷಗಳಲ್ಲಿ ಪ್ರವೇಶಾತಿಯ ಆಧಿಕ್ಯವಿರುವ ಪ್ರದೇಶಗಳು,
- ಪರೀಕ್ಷೆಗಳನ್ನು ನಡೆಸಲು ಅನುಕೂಲವಿರುವ ಕಾಲೇಜುಗಳು,
- ವಿದ್ಯಾರ್ಥಿಗಳಿಗೆ ಸಾರಿಗೆ - ಸಂಪರ್ಕಕ್ಕೆ ಅನುಕೂಲವಿರುವ ಪ್ರದೇಶಗಳ ಕಾಲೇಜುಗಳು

ಮೊದಲಾದ ಅಂಶಗಳನ್ನು ಪ್ರಧಾನವಾಗಿ ಪರಿಗಣಿಸಿದೆ. ಪ್ರಸ್ತುತ ಗುರುತಿಸುವ ಒಟ್ಟು 75 ಕಾಲೇಜುಗಳಲ್ಲಿ ಕರಾಮುವಿಯ 'ವಿದ್ಯಾರ್ಥಿ ಸಹಾಯ ಕೇಂದ್ರ' (Learner Support Centre) / ಅಧ್ಯಯನ ಕೇಂದ್ರ (Study Centre) ಗಳನ್ನು ಸ್ಥಾಪಿಸಲು ಅನುಮೋದನೆ ಕೋರಿ ಶೈಕ್ಷಣಿಕ ಮಂಡಳಿ ಸಭೆಗೆ ವಿಷಯ ಮಂಡಿಸಿದೆ.

**ತೀರ್ಮಾನ: ಡೀನ್ (ಅಧ್ಯಯನ ಕೇಂದ್ರ) ರವರಿಂದ ಸಲ್ಲಿಸಿರುವ ವಿದ್ಯಾರ್ಥಿ ಸಹಾಯಕ ಕೇಂದ್ರ ಹಾಗೂ ಅಧ್ಯಯನ ಕೇಂದ್ರದ ವಿವರಗಳನ್ನು ಸಭೆಯಲ್ಲಿ ಚರ್ಚಿಸಲಾಯಿತು, ದೂರ ಶಿಕ್ಷಣ ವ್ಯವಸ್ಥೆಯಲ್ಲಿ ವಿದ್ಯಾರ್ಥಿ ಸಹಾಯಕ ಕೇಂದ್ರ ಹಾಗೂ ಅಧ್ಯಯನ ಕೇಂದ್ರಗಳ ಪ್ರಾಮುಖ್ಯತೆಯನ್ನು ಗಮನಿಸಿ ಸಲ್ಲಿಸಿರುವ ಕೇಂದ್ರಗಳ ಪಟ್ಟಿಯಲ್ಲಿರುವ LSC No. 01-01 ಹೊರತುಪಡಿಸಿ ಉಳಿದ ಕೇಂದ್ರಗಳ ಬಗ್ಗೆ ಅನುಮೋದನೆ ನೀಡಲಾಯಿತು.**

## Subject No. : 46:09

Sub : Teachers holding administrative posts – reg.

Ref : University Order No. KSOU/AB/EST-1/293/ 2012-13 dated 02.03.2013.

* * * * *

The University had issued an order cited at reference (1) above informing all the teachers who are holding administrative posts in KSOU shall not hold Chairmanship of the Department, Chairmanship of BoS and BOE (both UG & PG). This order was issued pending approval of the Academic Council and the Board of Management. The order also states that, the order shall come into force with immediate effect. On

ಕುಲಸಚಿವರು 2017

ಕುಲಪತಿಗಳು 2017

verification of the records and files, it is found that, the matter was not placed before the Academic Council or the Board of Management for its consideration and ratification. In view of the above said facts, the matter is now placed before the Academic Council for an appropriate decision in the matter.

<u>ತೀರ್ಮಾನ:</u> ವಿಶ್ವವಿದ್ಯಾನಿಲಯದ ಆದೇಶ ಸಂಖ್ಯೆ: **KSOU/AB/EST-1/293/2012-13 dated 02.03.2013** ರಲ್ಲಿ ವಿಶ್ವವಿದ್ಯಾನಿಲಯದ ಅಧ್ಯಾಪಕರುಗಳು ಆಡಳಿತಾತ್ಮಕ ಹುದ್ದೆಗೆ ನಿಯೋಜನೆಗೊಂಡಾಗ ಎರಡು ಹುದ್ದೆಗಳನ್ನು ಏಕ ಸಮಯದಲ್ಲಿ ಧಾರಣ ಮಾಡುವಂತಿಲ್ಲವೆಂದು ಹೊರಡಿಸಲಾಗಿದ್ದ ಆದೇಶವನ್ನು ಸಭೆಯು ಕುಲಂಕುಷವಾಗಿ ಪರಿಶೀಲಿಸಿ ಅಧ್ಯಾಪಕರುಗಳ ಸೇವೆಯನ್ನು ಮತ್ತು ಅವರ ಪರಿಣಿತಿಯನ್ನು ಪರಿಣಾಮಕಾರಿಯಾಗಿ ಒಂದಕ್ಕಿಂತ ಹೆಚ್ಚು ಹುದ್ದೆಯಲ್ಲಿ ಬಳಸಿಕೊಳ್ಳುವುದು ಯುಕ್ತವೆಂದು ಸಭೆಯು ಅಭಿಪ್ರಾಯಪಟ್ಟು ದಿನಾಂಕ 02.03.2013 ರಂದು ಹೋರಡಿಸಲಾದ ಆದೇಶವನ್ನು ತಕ್ಷಣದಿಂದ ಜಾರಿಗೆ ಬರುವಂತೆ ನಿರಶನಗೊಳಿಸಲು ನಿರ್ಣಯಿಸಲಾಯಿತು.

**Subject No.46:10**

<u>**Sub**</u> : Recognition of Higher Education institutions to offer ODL Programmes 2018-19 – regarding.

<u>**Ref**</u> : (1) UGC Letter No. F.No.14-5/2018(DEB-I), Dtd. 06.06.2018.
(2) UGC letter(Speed Post) No.F.No.14-5/2018 (DEB-I) dtd.27.6.2018.

* * * * *

**1.** The University has submitted a proposal to the UGC through Online and Offline seeking recognition for the academic year 2018-19 July session. In response to the University proposal, the UGC vide letter No. cited at reference (1) above, has informed as under:

> *" that the first stage of processing of the proposal for recognition of ODL programmes for the year 2018-19 has been completed and the following deficiency is observed by the UGC. The University would also like to place before you a few key points relating to the grant of recognition".*

**(1) UGC Observation**: Master of Law is not permissible under ODL mode.

<u>The University has complied as under to the above said observation</u>:

*The University has been offering LLM Course from quite a long time. This is not a basic degree but it is only for acquiring higher qualification in the legal profession. For all legal and practical purpose*

ಕುಲಸಚಿವರು 20/7

ಕುಲಪತಿಗಳು 20/7

*LLB is considered as a basic requirement for enrolment of an advocate and other legal professions. It is in this context many Universities in the Country for offering LLM course through Distance Education. It is for this reason the Karnataka State Bar Council has issued a No Objection Certificate for offering LLM through a Distance Education mode. The No Objection Certificate also states that under rule Part IV, Rules of Legal Education Bar Council of India, 2008-Sections 7(1) (h) and (i), 24 (1) (c) (iii), (iiia), 49(1) (al), (ag) and (d), Advocates Act, 1961 are regulated only the institutions imparting LLB Course. Therefore approval or affiliation is not necessary from The Bar Council of India. Hence, you are requested to re-examine the matter in the light of the above facts.*

**2.** A brief report has been submitted to Department – Parliamentary Standing Committee on Human Resource Development, New Delhi, visited to Mysore on 04.06.2018, on measures undertaken to restore the recognition.

**3.** The University has attended an interface meeting held on 05.07.2018. The documents submitted at the time of interface meeting are enclosed herewith as Annexure-1.

**4.** The Hon'ble Vice-Chancellor along with following Officers attended the interface meeting:

(1) Dr.A.Khadar Pasha, Registrar
(2) Prof. Jagadeesha, Dean (Academic) and
(3) Dr.G.N.Raju, Special Officer (UGC Cell)

Special permission for payment of air fare in respect to Dr.N.G. Raju is placed before the Board of Management for consideration and appropriate decision.

**5.** The University has submitted a proposal for 32 programmes (Annexure-2). Out of these 32 programmes, 30 Departments have submitted SLM. The SLM for B.Ed., programme is ready, however, the programme would be started from January cycle. In case of B.A, and M.A. (Hindi), the Chairman has not submitted the SLM and therefore could not be presented before UGC.

**6.** The University also presented the details of the cadre strength of teaching faculty and the working positions to substantiate that the University is possessing adequate faculties to meet the requirement of UGC norms. The details of the sanctioned posts and the working positions is enclosed as

ಕುಲಸಚಿವರು 20/7　　　　ಕುಲಪತಿಗಳು 20/7

Annexure – 3.

**7.** The Government of India and the UGC have taken a policy decision to digitize all the activities of the University, so that there will be a complete transparency in governance.

**8.** In pursuance of the said policy, UGC in their Regulation -2017 (ODL Programmes) has categorically stated in Clause 10 of the said Regulation that every HEIs shall take such measures as are necessary to blend Information Communication technologies for enhancing the effectiveness of teaching-learning process, administrative functioning and maintenance of updated information in respect of status of admissions, registration, teaching-learning activities through online support for interactive learning with learner feedback and continuous comprehensive evaluation, certification and other aspects of the student support. The UGC also stressed the need in Clause 12 of the Regulation that the admission and other fee shall be accepted (only by way of online transfer, bank draft or pay order directly in favour of HEIs).

**9.** Therefore, it has become mandatory for University to digitize its activities to fall in line with the policies of Government of India and the UGC. In this context, the University is proposing to introduce Online admission from the academic year 2018-19.

In view of the facts stated above, the matter is placed before the Academic Council for its kind perusal, consideration and appropriate decision.

ತೀರ್ಮಾನ: ಯು.ಜಿ.ಸಿ. ಯಿಂದ 06.06.2018 ಮತ್ತು 26.06.2018 ಪತ್ರಗಳಂತೆ ವಿಶ್ವವಿದ್ಯಾನಿಲಯವು ಈಗಾಗಲೇ ಕೈಗೊಂಡಿರುವ ಕ್ರಮಗಳಿಗೆ ಶೈಕ್ಷಣಿಕ ಮಂಡಳಿ ಅನುಮೋದನೆ ನೀಡಲಾಯಿತು. ವಿ.ವಿಯು ಯು.ಜಿ.ಸಿ ಗೆ ಸಲ್ಲಿಸಿರುವ ದಾಖಲೆಗಳ ಪಟ್ಟಿಯಲ್ಲಿ ಶಿಕ್ಷಣ ಕ್ರಮಗಳ ಕೈಪಿಡಿ ಹಾಗೂ ವಿಷಯ ಸಂಯೋಜನಾಧಿಕಾರಿಗಳ ಪಟ್ಟಿಗಳನ್ನು ಸೇರಿಸಿರುವುದಕ್ಕೆ ಒಪ್ಪಿಗೆ ನೀಡಲಾಯಿತು.

ವಿಷಯ ಸಂಖ್ಯೆ:46:11

ವಿಷಯ: ವಿಶ್ವವಿದ್ಯಾನಿಲಯದಲ್ಲಿ **Ph.D.,** ಕಾರ್ಯಕ್ರಮದ ಅಧ್ಯಾದೇಶವನ್ನು **(Ordinance)** ಸಿದ್ಧಪಡಿಸಿರುವ ಬಗೆಗೆ.

**Ph.D.,** ಶಿಕ್ಷಣಕ್ರಮಗಳನ್ನು ಯುಜಿಸಿ **Ph.D., Regulation 2016** ರ ಪ್ರಕಾರ ಆರಂಭಿಸಲು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಉದ್ದೇಶಿಸಿದೆ. ಈ ಶಿಕ್ಷಣ ಕ್ರಮಗಳು ಸಾಂಪ್ರದಾಯಿಕ ವಿಶ್ವವಿದ್ಯಾನಿಲಯಗಳಲ್ಲಿ ಇರುವಂತಹ **Ph.D.,** ಗಳ ಪ್ರಕಾರವೇ ನಿರ್ವಹಣೆಯಾಗುತ್ತದೆ. ಈ ಶಿಕ್ಷಣ ಕ್ರಮವನ್ನು ಮುಂದಿನ ದಿನಗಳಲ್ಲಿ ಆರಂಭಿಸುವ ಸದುದ್ದೇಶದಿಂದ ಅಧ್ಯಾದೇಶವನ್ನು **(Ordinance)** ಸಿದ್ಧಪಡಿಸಲಾಗಿದೆ. ಅದರ ಒಂದು ಕರಡನ್ನು ನಿಯಮಾವಳಿ ಪ್ರಕಾರ ಸಿದ್ಧಪಡಿಸಲಾಗಿದ್ದು, ಶೈಕ್ಷಣಿಕ ಮತ್ತು ವ್ಯವಸ್ಥಾಪನಾ ಮಂಡಳಿ ಸಭೆಗಳಲ್ಲಿ ಮಂಡಿಸಿ ಅನುಮೋದನೆ ಪಡೆಯಬೇಕಾಗಿರುತ್ತದೆ. ಆದ್ದರಿಂದ ಸದರಿ ವಿಷಯವನ್ನು ಸಭೆಗೆ ಮಂಡಿಸಿದೆ.

ಕುಲಸಚಿವರು 20/7 ಕುಲಪತಿಗಳು 20/7

ತೀರ್ಮಾನ: 1) ಯು.ಜಿ.ಸಿ ಹೊರಡಿಸಿರುವ 2017ರ ಯು.ಜಿ.ಸಿ ನಿಯಮಾವಳಿಗೆ ಆಧಾರದ ಮೇಲೆ ಆಧ್ಯಾದೇಶದ ಬಗ್ಗೆ ಸಮಗ್ರ ಚರ್ಚೆಯಾಯಿತು. ಪಿ.ಹೆಚ್ ಡಿ. ಕೋರ್ಸ್‌ಗಳನ್ನು ಕರಾಮುವಿ ನಲ್ಲಿ **Regular Mode** ನಲ್ಲಿ ಪ್ರಾರಂಭಿಸಲು ಅನುವು ಮಾಡಿಕೊಳ್ಳಲು ಯು.ಜಿ.ಸಿ ನಿಯಮದಂತೆ ರಚಿಸಲ್ಪಟ್ಟ ಆಧ್ಯಾದೇಶದ ಕರುಡನ್ನು ಅನುಮೋದಿಸಲಾಯಿತು.

ವಿಷಯ ಸಂಖ್ಯೆ : 46:12

ವಿಷಯ : ವಿದ್ಯಾರ್ಥಿಗಳಿಗೆ ಆನ್‌ಲೈನ್ ನಲ್ಲಿ ಸೇವೆ ಒದಗಿಸುವ ಬಗ್ಗೆ ರಾಜ್ಯ ಸರ್ಕಾರದ ಉಪಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾನಿಲಯಗಳು), ಇವರ ಪತ್ರ ದಿನಾಂಕ: 24.05.2018 ಮತ್ತು ಯು.ಜಿ.ಸಿ. ಯ Digital Initiatives for Higher Education ನ Action Plan 17-by-17 ಬಗೆಗೆ

*****

ವಿಶ್ವವಿದ್ಯಾನಿಲಯಗಳು ವಿದ್ಯಾರ್ಥಿಗಳಿಗೆ ನೀಡುವ ವರ್ಗಾವಣೆ ಪ್ರಮಾಣ ಪತ್ರ, ಅಂಕಪಟ್ಟಿ ಪ್ರಮಾಣ ಪತ್ರ, ಪದವಿ ಪ್ರಮಾಣ ಪತ್ರ, ಅಂಕಪಟ್ಟಿ ಪ್ರಮಾಣ ಪತ್ರದ ನಕಲು ಪ್ರತಿ ಮತ್ತು ವಲಸೆ ಪ್ರಮಾಣ ಪತ್ರಗಳನ್ನು ಆನ್‌ಲೈನ್ ಮೂಲಕ ವಿದ್ಯಾರ್ಥಿಗಳಿಗೆ ವಿತರಿಸುವ ನಿಟ್ಟಿನಲ್ಲಿ ಹಾಗೂ ವಿವಿ ನಿಲಯಗಳು ನೀಡುವ ಇತರೆ ಸೇವೆಗಳನ್ನೂ ಸಹ ಆನ್‌ಲೈನ್ ಮೂಲಕ ಒದಗಿಸುವ ಸಲುವಾಗಿ ಪರಿಶೀಲಿಸಿ ಅಗತ್ಯ ಕ್ರಮವಹಿಸುವುದು ಹಾಗೂ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾನಿಲಯವು ಅಳವಡಿಸಿಕೊಂಡಿರುವ ಕ್ರಮವನ್ನು ಅನುಸರಿಸುವಂತೆ ತಿಳಿಸಿರುತ್ತಾರೆ (ಪ್ರತಿ ಲಗತ್ತಿಸಿದೆ).

ಹಾಗೆಯೇ, ಯು.ಜಿ.ಸಿ. ಯು ಎಲ್ಲಾ ವಿಶ್ವವಿದ್ಯಾನಿಲಯಗಳ ಕುಲಪತಿಗಳಿಗೆ ಕ್ರಿಯಾ ಯೋಜನೆ (Action Plan 17-by-17) ನಲ್ಲಿರುವಂತೆ ಪ್ರತಿ ವಿಶ್ವವಿದ್ಯಾನಿಲಯಗಳು 17 ಅಂಶಗಳಿಗೆ ಕ್ರಿಯಾ ಯೋಜನೆಗಳನ್ನು ಸಿದ್ಧಪಡಿಸಿ ಸಲ್ಲಿಸುವಂತೆ ತಿಳಿಸಿದ್ದು, ಅದರಂತೆ ವಿವಿ ನಿಲಯಕ್ಕೆ ಸಂಬಂಧಿಸಿದಂತೆ ಈಗಾಗಲೇ 17 ಅಂಶಗಳ ಕ್ರಿಯಾ ಯೋಜನೆಯನ್ನು ಸಿದ್ಧಪಡಿಸಿ ರವಾನಿಸಲಾಗಿರುತ್ತದೆ (ಪ್ರತಿ ಲಗತ್ತಿಸಿದೆ). ಮುಂದುವರೆದು, ಯು.ಜಿ.ಸಿ. ಯವರ ಕ್ರಿಯಾ ಯೋಜನೆಯಲ್ಲಿರುವ ಕೆಳಕಂಡ ಅಂಶಗಳಿಗೆ ಕೆಳಕಂಡಂತೆ ಕ್ರಮವನ್ನು ವಹಿಸಲಾಗುತ್ತಿರುತ್ತದೆ.

SWAYAM

- 2019-20ನೇ ಶೈಕ್ಷಣಿಕ ಸಾಲಿನಿಂದ ಯು.ಜಿ.ಸಿ. ಯವರು ತಿಳಿಸಿರುವ ಕೆಲವೊಂದು SWAYAM Courses ಗಳನ್ನು ಅಳವಡಿಸಿಕೊಳ್ಳಲು ಉದ್ದೇಶಿಸಲಾಗಿರುತ್ತದೆ.
- SWAYAM ರವರು ಸಿದ್ಧಪಡಿಸಿರುವ ರೀತಿಯಲ್ಲಿ ಶಿಕ್ಷಣ ಕ್ರಮವನ್ನು ಅಳವಡಿಸಿಕೊಳ್ಳಲು ಬೋಧಕರಿಗೆ ತಿಳಿಸಲಾಗಿರುತ್ತದೆ.
- Digital Learning Monitoring Cell ಅನ್ನು ರಚಿಸಿ ICT Cell ವಿಭಾಗಕ್ಕೆ ಸೇರಿಸಲಾಗಿದೆ.
- SWAYAM DTH Channels ಅನ್ನು ವೀಕ್ಷಿಸಲು Free Dish ಖರೀದಿಸಿ ಕೇಂದ್ರ ಕಛೇರಿಯ ಕಾವೇರಿ ಸಭಾಂಗಣದಲ್ಲಿ ಅಳವಡಿಸಲಾಗಿರುತ್ತದೆ.

National Digital Library

- ಯು.ಜಿ.ಸಿ. ಯವರ ಎಲ್ಲಾ ವಿಶ್ವವಿದ್ಯಾನಿಲಯಗಳು ತುರ್ತಾಗಿ National Digital Library (https://ndl.iikgp.ac.in/) ಗೆ ಸೇರ್ಪಡೆಯಾಗುವಂತೆ ತಿಳಿಸಿದ್ದು, ಈ ಬಗ್ಗೆ ಕ್ರಮವಹಿಸಲಾಗುತ್ತಿರುತ್ತದೆ.

ಕುಲಸಚಿವರು | ಕುಲಪತಿಗಳು

National Academic Depository

National Academic Depository (NAD) ಇದು Online Store House ಆಗಿದ್ದು, ವಿವಿ ನಿಲಯಗಳು ಸಲ್ಲಿಸುವ ವಿವಿಧ ದಾಖಲೆಗಳಾದ ಪದವಿ ಪ್ರಮಾಣ ಪತ್ರ, ಅಂಕಪಟ್ಟಿ ಹಾಗೂ ಇತರೆ ದಾಖಲೆಗಳನ್ನು ಡಿಜಿಟಲ್ ಮಾದರಿಯಲ್ಲಿ ಅಪ್‌ಲೋಡ್ ಮಾಡುವ ಕಾರ್ಯವನ್ನು ನಿರ್ವಹಿಸುತ್ತದೆ.

- Dr. Sunita Siwach, ಜಂಟಿ ಕಾರ್ಯದರ್ಶಿ, ಯು.ಜಿ.ಸಿ. ಯವರ ನಿರ್ದೇಶನದಂತೆ ವಿವಿ ನಿಲಯವು Service Level ಒಪ್ಪಂದವನ್ನು NSDL Data Base Management Limited (NDML) ರವರೊಂದಿಗೆ ಮಾಡಿಕೊಂಡಿರುತ್ತದೆ.
- NAD Cell ಗೆ ಡಾ. ಶೆಲ್ವಪಿಳ್ಳೆ ಅಯ್ಯಂಗಾರ್, ಉ.ಕು.ಸ (ಪರೀಕ್ಷಾಂಗ), ರವರನ್ನು ನೋಡಲ್ ಅಧಿಕಾರಿಯನ್ನಾಗಿ ನೇಮಿಸಲಾಗಿರುತ್ತದೆ.

Other Digital Initiatives

- ಯು.ಜಿ.ಸಿ. ರವರ ಡಿಜಿಟಲ್ ಕ್ಯಾಂಪಸ್ ನಂತೆ ಸೇವೆ ಒದಗಿಸಲು ಪ್ರವೇಶಾತಿ, ಆಡಳಿತ, ಪ್ರವೇಶಾತಿ ಪ್ರಕ್ರಿಯೆಗಳನ್ನು ಆನ್‌ಲೈನ್‌ನಲ್ಲಿ ಸೇವೆ ಒದಗಿಸಲು ಕ್ರಮವಹಿಸಲಾಗುತ್ತಿರುತ್ತದೆ.
- Ecofriendly ಪರಿಸರ ಸ್ನೇಹಿ ವಲಯವನ್ನಾಗಿಸಲು ವಿವಿ ವತಿಯಿಂದ ಕಟ್ಟುನಿಟ್ಟಿನ ಕ್ರಮವಹಿಸಲಾಗುತ್ತಿರುತ್ತದೆ.

Planning

ಯು.ಜಿ.ಸಿ. ರವರು ತಿಳಿಸಿರುವಂತೆ ಕ್ರಿಯಾಯೋಜನೆಗಳನ್ನು ರಚಿಸಿಕೊಂಡಿರುತ್ತದೆ.

ರಾಜ್ಯ ಸರ್ಕಾರದ ಉಪ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾನಿಲಯಗಳು) ಇವರು ತಿಳಿಸಿರುವಂತೆ ಕ್ರಮವಹಿಸುವ ಬಗ್ಗೆ ಹಾಗೂ ಯು.ಜಿ.ಸಿ. ಯವರ ಕ್ರಿಯಾಯೋಜನೆ ಬಗ್ಗೆ ಈಗಾಗಲೇ ಕ್ರಮವಹಿಸಿರುವ ಮೇಲ್ಕಂಡ ವಿಷಯವನ್ನು ಮಾನ್ಯ ಶೈಕ್ಷಣಿಕ ಮಂಡಳಿ ಸಭೆಗೆ ಮಂಡಿಸಿದೆ.

**ತೀರ್ಮಾನ: ಸದರಿ ವಿಷಯದ ಬಗ್ಗೆ ಚರ್ಚಿಸಲಾಯಿತು. ವಿಶ್ವವಿದ್ಯಾನಿಲಯವು ಯು.ಜಿ.ಸಿ ಮಾನ್ಯತೆ ಪಡೆದ ನಂತರ ಡಿಜಿಟಲ್ ಇನಿಶಿಯೇಟಿವ್ ಅನ್ನು ಹಂತ ಹಂತವಾಗಿ ಅನುಷ್ಠಾನಗೊಳಿಸಲು ತೀರ್ಮಾನಿಸಲಾಯಿತು.**

**ವಿಷಯ ಸಂಖ್ಯೆ : 46:13**

Sub : Regarding changing of nomenclature of *PG Diploma and Diploma in Information Technology* to *PG Diploma and Diploma in Information Science.*

With respect to the matter related to changing of nomenclature and use of SLM's of PG Diploma and Diploma in Information Technology to PG Diploma and Diploma in Information Science, Board of Studies convened a meeting on 13th September 2017 at Dept. of Information Technology, KSOU, Mysore. As per the meeting of the Board of Studies related to the above subject, the following are recommended for acceptance.

**ಕುಲಸಚಿವರು** 2017 | **ಕುಲಪತಿಗಳು** 2017

- Board has considered the change of nomenclature of the following programmes conducted by Dept. of Information Technology by comparing with the courses of other University/Institutes.

| Sl No. | Existing nomenclature | Proposed nomenclature |
|---|---|---|
| 1 | PG Diploma in Information Technology(PGDIT) | PG Diploma in Information Science (PGDIS) |
| 2 | Diploma in Information Technology(DIT) | Diploma in Information Science (DIS) |

- Board has observed that, most of the courses/subjects covered under the syllabus prescribed for conducting under PG Diploma and Diploma in Information Technology is almost similar to the courses/subjects of other University/Institutes.
- The Board recommended that the existing SLM's used by PG Diploma and Diploma in Information Technology shall be retained to conduct PG Diploma and Diploma in Information Science by changing the nomenclature. As the same SLM's suits the purpose, Board decided not to include any other new course/subject with the present syllabus.
- Board has recommended to change the nomenclature as per the following:

- PG Diploma in Information Technology (PGDIT) to PG Diploma in Information Science (PGDIS).
- Diploma in Information Technology (DIT) to Diploma in Information Science (DIS).

The change mentioned above will aid in smooth course of actions without any ambiguity. Hence, the above subject is placed before Academic Council for discussion and decision.

<u>ತೀರ್ಮಾನ</u> : ಮಾಹಿತಿ ವಿಜ್ಞಾನ ವಿಭಾಗದ ಅಧ್ಯಕ್ಷರು ನೀಡಿರುವ ಪ್ರಸ್ತಾವನೆಯ ಬಗ್ಗೆ ಚರ್ಚಿಸಲಾಯಿತು. ಡಿಪ್ಲೋಮಾ- ಪಿ.ಜಿ ಡಿಪ್ಲೋಮಾ ಮಾಹಿತಿ ತಂತ್ರಜ್ಞಾನ ವನ್ನು ಡಿಪ್ಲೋಮಾ/ ಪಿ.ಜಿ. ಡಿಪ್ಲೋಮಾ ಮಾಹಿತಿ ವಿಜ್ಞಾನ ಎಂದು ಬದಲಾಯಿಸಿಕೊಳ್ಳಲು ಒಪ್ಪಿಗೆ ನೀಡಲಾಯಿತು.

ಕುಲಸಚಿವರು 2017 | ಕುಲಪತಿಗಳು 2017

ವಿಷಯ ಸಂಖ್ಯೆ : 46:14

## Quality Mandate

ಕಾರ್ಯದರ್ಶಿಗಳು ವಿಶ್ವವಿದ್ಯಾನಿಲಯ ಧನಸಹಾಯ ಆಯೋಗ, ನವದೆಹಲಿ, ಇವರಿಂದ ಬಂದಿರುವ ಪತ್ರದ ಮುಖ್ಯಾಂಶಗಳು ಈ ಕೆಳಕಂಡಂತಿವೆ :

The Commission, in its 532nd meeting held on 24.05.2018, approved the objectives set for improving the quality in Higher Education Institutions (HEIs). All HEIs shall strive to achieve the following Objectives by 2022.

1. Improve the graduate outcomes for the students, so that at least 50% of them secure access to employment / self-employment or engage themselves in pursuit of higher education.
2. Promote link of the students with the society / industry such that at least 2 / 3rd of the students engage in socially productive activities during their period of study in the institutions.
3. Train the students in essential professional and soft skills such as team work, communication skills, leadership skills, time management skills etc; inculcate human values and professional ethics, and the spirit of innovation/entrepreneurship and critical thinking among the students and promote avenues for display of these talents.
4. Ensure that teacher vacancies at any point of time does not exceed 10% of the sanctioned strength; and 100% of the teachers are oriented about the latest and emerging trends in their respective domains of knowledge, and the pedagogies that translate their knowledge to the students.
5. Every institution shall get NAAC accreditation with a minimum score of 2.5 by 2022.

ಕುಲಸಚಿವರು

ಕುಲಪತಿಗಳು

The following **<u>initiatives</u>** shall be undertaken in pursuit of the above objectives:

1. Induction programme for students.
2. Learning outcome-based curriculum framework – revision of curriculum in regular intervals.
3. Use ICT based learning tools for effective teaching-learning process.
4. Soft skills for students.
5. Social and Industry connect for every institution. Every institution shall adopt at least 5 villages for exchange of knowledge and for the overall social/economic betterment of the village communities.
6. Examination Reforms – test the concept, and application; exit examinations.
7. Tracking of the student progress after completion of course.
8. Induction training for all new teachers, and annual refresher training for all teachers – role of the NRCs; and mandatory leadership/management training for all educational administrators.
9. Promoting quality research by faculty and creation of new knowledge.
10. Mentoring of non-accredited institutions, so that every institution can get accreditation by 2022.

ಈ ಮೇಲಿನ ಅಂಶಗಳ ಕುರಿತು ಯು.ಜಿ.ಸಿ. ಯ ಕಾರ್ಯದರ್ಶಿಗಳು ಪ್ರತಿಯೊಂದು ವಿಶ್ವವಿದ್ಯಾನಿಲಯಗಳಲ್ಲಿ ಅನುಷ್ಠಾನಗೊಳಿಸಲು ತಿಳಿಸಿರುವ ಹಿನ್ನೆಲೆಯಲ್ಲಿ, ಸದರಿ ವಿಷಯವನ್ನು ಮಾನ್ಯ ಕುಲಪತಿಗಳು ಶೈಕ್ಷಣಿಕ ಮಂಡಳಿ ಸಭೆಗೆ ಮತ್ತು ವ್ಯವಸ್ಥಾಪನಾ ಮಂಡಳಿ ಸಭೆಯ ಅನುಮೋದನೆ ಪಡೆಯುವುದು ಅವಶ್ಯವೆಂದು ಆದೇಶಿಸಿರುವುದರಿಂದ ವಿಷಯವನ್ನು ಸಭೆಗೆ ಮಂಡಿಸಿದೆ. ಅಗತ್ಯ ಅನುಮೋದನೆ ಕೋರಿದೆ.

ಕುಲಸಚಿವರು 20/7

ಕುಲಪತಿಗಳು 20/7

ತೀರ್ಮಾನ: ಯು.ಜಿ.ಸಿ ಯಿಂದ **Quality Mandate** ಗಳ ಉದ್ದೇಶಗಳನ್ನು ಗಮನಿಸಲಾಯಿತು. ವಿ.ವಿ.ಗೆ ಯು.ಜಿ.ಸಿ ಮಾನ್ಯತೆ ಬಂದ ನಂತರ ಅವುಗಳನ್ನು ಅನುಷ್ಠಾನಗೊಳಿಸಲು ತೀರ್ಮಾನಿಸಲಾಯಿತು.

ವಿಷಯ ಸಂಖ್ಯೆ : 46:15

The Institute of Chartered Accounts of India, Noida, ಇವರಿಂದ ಬಂದಿರುವ ಪತ್ರದ ಮುಖ್ಯಾಂಶಗಳು ಈ ಕೆಳಕಂಡಂತಿವೆ :

**Recognition of Chartered Accountancy qualification for registration to Ph.D. programme.**

The Institute of Chartered Accountants of India is the premier Accounting Body in India for regulating the profession of Chartered Accountants (CA) established by an Act of Parliament viz., The Chartered Accountants Act, 1949.The Institute registers students for pursuing the Chartered Accountancy Course for various levels (Foundation, Intermediate and Final Level) of the course, provides theoretical education, practical training , conducts examinations and thereafter confers Membership to the successful students to be known as "Chartered Accountant". The ICAI has grown to cross the mark of more than 2.80 lakh members and 8.35 lakh students as of now.

The Chartered Accountants (CAs) are spread all over the country and are generally gainfully engaged either in rendering professional services to the public or to their respective employing bodies, many of them are interested n undertaking research work for Ph.D. degree. Given an opportunity, we believe, many members of the Institute will be able to contribute their intrinsic worth to the society by producing valuable research studies. There is no doubt that CAs with their sound practical and technical knowledge can contribute very significantly to the world of academics in the field of Accountancy and Commerce, if allowed to pursue their Ph.D.

In this context, we may apprise you that the Association of Indian Universities (AIU) (copy attached) has already recognized Chartered Accountancy qualification along with graduation degree, as equivalent to

ಕುಲಸಚಿವರು 2017 ಕುಲಪತಿಗಳು 2017

postgraduate degree in commerce or allied discipline for the purpose of pursuing Ph.D programme of various universities. Accordingly, 101 Indian Universities, 6 IIMs and 2 IITs (Madras & Bombay) (list enclosed) in the country have recognized Chartered Accountancy qualification for the specific purpose of registration to Ph.D. programme of respective universities.

We would, therefore, request you to kindly accord recognition to Chartered Accountancy Course for enrolling Chartered Accountants as research scholars for the doctoral degree (Ph.D) of your university.

ಈ ಮೇಲಿನ ಅಂಶಗಳ ಕುರಿತು ICAI ರವರು ವಿಶ್ವವಿದ್ಯಾನಿಲಯಗಳಲ್ಲಿ ಅನುಷ್ಠಾನಗೊಳಿಸಲು ತಿಳಿಸಿರುವ ಹಿನ್ನೆಲೆಯಲ್ಲಿ, ಸದರಿ ವಿಷಯವನ್ನು ಮಾನ್ಯ ಕುಲಪತಿಗಳು ಶೈಕ್ಷಣಿಕ ಮಂಡಳಿ ಸಭೆಗೆ ಮತ್ತು ವ್ಯವಸ್ಥಾಪನಾ ಮಂಡಳಿ ಸಭೆಯ ಅನುಮೋದನೆ ಪಡೆಯುವುದು ಅವಶ್ಯವೆಂದು ಆದೇಶಿಸಿರುವುದರಿಂದ ವಿಷಯವನ್ನು ಸಭೆಗೆ ಮಂಡಿಸಿದೆ. ಅಗತ್ಯ ಅನುಮೋದನೆ ಕೋರಿದೆ.

**<u>ತೀರ್ಮಾನ:</u> ಐ.ಸಿ.ಎ.ಐ ನಿಂದ ಬಂದ ಪತ್ರವನ್ನು ಗಮನಿಸಲಾಯಿತು. ಈ ಸಂಸ್ಥೆಯಿಂದ ಚಾರ್ಟೆಡ್ ಅಕೌಂಟೆನ್ಸಿ ಪೂರೈಸಿದವರು ಪಿ.ಹೆಚ್.ಡಿ ಇನ್ ಕಾಮರ್ಸ್ ಕೋರ್ಸನ್ನು ವ್ಯಾಸಂಗ ಮಾಡಲು ಅರ್ಹರರೆಂದು ಪರಿಗಣಿಸಬೇಕು ಎಂಬುದರ ಬಗ್ಗೆ ಚರ್ಚಿಸಲಾಯಿತು, ಮತ್ತು ಅಗತ್ಯ ಅನುಮೋದನೆ ನೀಡಲಾಯಿತು.**

**ವಿಷಯ ಸಂಖ್ಯೆ: 46:16**

**ವಿಷಯ: ವಿಶ್ವವಿದ್ಯಾನಿಲಯದ ಹಿಂದಿ ವಿಭಾಗ SLM ಪುನರ್ ಸಂರಚನೆಯ ಬಗ್ಗೆ ಕೈಗೊಂಡಿರುವ ಕ್ರಮಗಳ ಕುರಿತು.**

ದಿನಾಂಕ: 17-08-2017 ಲಿಂದ 19-04-2018 ರವರೆಗೆ ಡೀನ್ (ಶೈಕ್ಷಣಿಕ) ವಿಭಾಗದಿಂದ ಸುಮಾರು 16 ಪತ್ರಗಳು ಹಿಂದಿ ವಿಭಾಗಕ್ಕೆ ಬರೆದು, ಯುಜಿಸಿ ದೂರಶಿಕ್ಷಣ ನಿಯಮಾವಳಿ ಪ್ರಕಾರ **SLM** ಪುನರ್ ಸಂರಚನೆ ಮಾಡಬೇಕೆಂದು ಸೂಚಿಸಲಾಗಿತ್ತು. ಹಿಂದಿ ವಿಭಾಗದ ಅಧ್ಯಕ್ಷರಾದ ಡಾ. ಅಶೋಕ್ ಕಾಂಬ್ಳೆ ಅವರು ನಿಗದಿ ಪಡಿಸಿದ ರೂಪದಲ್ಲಿ SLM ಗಳನ್ನು ಸಂರಚಿಸದೆ ಹಳೆಯ ಅಧ್ಯಯನ ಸಾಮಗ್ರಿಗಳಿಗೆ ಕೈಬರಹದಲ್ಲಿ ಬರೆದು ಸಲ್ಲಿಸಿದ್ದರು. ದಿನಾಂಕ: 16.05.2018 ರಂದು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ **SLM** ಪುನರ್ ಸಂರಚನೆ ಪ್ರಗತಿ ಪರಿಶೀಲನಾ ಸಭೆಗೆ ಹಿಂದಿ ವಿಭಾಗದ ಅಧ್ಯಕ್ಷರಾದ ಡಾ. ಅಶೋಕ್ ಕಾಂಬ್ಳೆ ಗೈರುಹಾಜರಾಗಿದ್ದರು. ಇವರಿಗೆ ಟಿಪ್ಪಣಿ ಮತ್ತು ಕಛೇರಿ ಸೂಚಿಗಳನ್ನು ನೀಡಲಾಗಿತ್ತು. ಅದಕ್ಕೆ ಉತ್ತರವಾಗಿ ವಿಭಿನ್ನ ಹೇಳಿಕೆ ನೀಡಿರುತ್ತಾರೆ. ಹಳೆಯ ಪಾಠಗಳನ್ನು ಯು.ಜಿ.ಸಿ Interface Meeting ನಲ್ಲಿ ಸಲ್ಲಿಸುವುದು ಕಷ್ಟ ಸಾಧ್ಯವಾಯಿತು. ಇದರಿಂದ ದಶಕಗಳಿಂದ ನಡೆದಂತಹ

**ಕುಲಸಚಿವರು** 2017

**ಕುಲಪತಿಗಳು** 20/7

ಕೋರ್ಸ್‌ಗಳ ಮಾನ್ಯತೆ ಬಗ್ಗೆ ಗೊಂದಲವಾಯಿತು. ಯು.ಜಿ.ಸಿ Interface Meeting ಆದ ನಂತರ ದಿನಾಂಕ: 07-07-2018 ರಂದು ನಡೆದ SLM ಪೂರಕ ಅಧ್ಯಯನ ಸಾಮಗ್ರಿ ರಚಿಸಲು ಆಯೋಜಿಸಿದ್ದ ಅಧ್ಯಕ್ಷರುಗಳ ಸಭೆಗೂ, ಹಿಂದಿ ವಿಭಾಗದ ಅಧ್ಯಕ್ಷರು ಗೈರುಹಾಜರಾಗಿದ್ದರು. ಡಾ. ಅಶೋಕ ಕಾಂಬ್ಳೆ ಅವರು ಅನಗತ್ಯ ತಗಾದೆ ತಗೆಯುವುದು ಅವರ ಚಾಳಿಯಾಗಿದೆ. ಇದು ದಿನಾಂಕ: 01.01.2014ರ ಕಛೇರಿ ಸೂಚಿ ಪ್ರಕಾರ ಸ್ವಯಂ ವೇದ್ಯವಾಗಿದೆ. ಪಾಠಗಳನ್ನು ಡಿ.ಟಿ.ಪಿ ಮಾಡಿಸಲು ವಿಫಲರಾಗಿದ್ದಾಗ, ಹಿಂದಿ ವಿಭಾಗದ ಎಸ್.ಎಲ್.ಎಂ. ಜವಾಬ್ದಾರಿಯನ್ನು ಡಾ. ಪ್ರಭುಸೇನಾ ರವರಿಗೆ ವಹಿಸಿಕೊಡಲಾಗಿತ್ತು. ಈ ಎಲ್ಲಾ ಅಂಶಗಳನ್ನು ಒಳಗೊಂಡ ವಿಷಯವನ್ನು ಶೈಕ್ಷಣಿಕ ಮಂಡಳಿ ಸಭೆಗೆ ಚರ್ಚೆ ಮತ್ತು ನಿರ್ಣಯಕ್ಕಾಗಿ ಮಂಡಿಸಿದೆ.

**ತೀರ್ಮಾನ: ಯು.ಜಿ.ಸಿ. ದೂರ ಶಿಕ್ಷಣ ನಿಯಮಾವಳಿ 2017 ರ ಪ್ರಕಾರ ಹಿಂದಿ ವಿಭಾಗದ ಅಧ್ಯಕ್ಷರು ಬಿ.ಎ ಮತ್ತು ಎಂ.ಎ ಕೋರ್ಸ್‌ಗಳ ಬಗ್ಗೆ ಸ್ವಯಂ ಕಲಿಕಾ ಅಧ್ಯಯನ ಸಾಮಗ್ರಿಯನ್ನು ವಿಶ್ವವಿದ್ಯಾನಿಲಯವು ನಿಗಧಿಪಡಿಸಿದ ರೀತಿಯಲ್ಲಿ ನಿರ್ವಹಿಸದೆ ಅಸಹಕಾರ ತೋರಿರುವುದನ್ನು ಡೀನ್ (ಶೈಕ್ಷಣಿಕ) ನೀಡಿರುವ ವರದಿಯಲ್ಲಿ ಗಮನಿಸಲಾಯಿತು. ವಿ.ವಿ. ಯ ಇನ್ನಿತರ ಎಲ್ಲಾ ವಿಭಾಗಗಳು ಸಕಾಲದಲ್ಲಿ ಎಸ್.ಎಲ್.ಎಂ. ಗಳನ್ನು ಸಿದ್ಧಪಡಿಸಿದರೂ ಹಿಂದಿ ವಿಭಾಗ ಅಧ್ಯಕ್ಷರ ಬೇಜವಾಬ್ದಾರಿ ಕುರಿತು ಚರ್ಚಿಸಲಾಯಿತು. ಯು.ಜಿ.ಸಿ ಇಂಟರ್ ಫೇಸ್ ಮೀಟಿಂಗ್‌ನಲ್ಲಿ ಹಿಂದಿ ವಿಭಾಗದ ಹಳೆಯ ಪಾಠಗಳನ್ನು ಹಾಜರುಪಡಿಸಿದಾಗ ವಿಶ್ವವಿದ್ಯಾನಿಲಯಕ್ಕೆ ಮುಜಗರವಾಯಿತು ಎಂಬುದರ ಬಗ್ಗೆ ಸಭೆಯು ತೀವ್ರ ಬೇಸರ ವ್ಯಕ್ತಪಡಿಸಿತ್ತು. ವಿಶ್ವವಿದ್ಯಾನಿಲಯದ ಹಿತದೃಷ್ಟಿಯಿಂದ ಹಿಂದಿನಿಂದಲೂ ಚಾಲ್ತಿಯಲ್ಲಿದ್ದ ಹಿಂದಿ ವಿಭಾಗಗಳ ಕೋರ್ಸುಗಳನ್ನು ಮುಂದುವರೆಸುವಂತೆ ಮತ್ತು ಇದರ ಬಗ್ಗೆ ಎಸ್.ಎಲ್.ಎಂ. ಗಳನ್ನು ತ್ವರಿತ ಗತಿಯಲ್ಲಿ ಸಿದ್ಧಪಡಿಸಿಕೊಳ್ಳುವ ನಿಟ್ಟಿನಲ್ಲಿ ಪರ್ಯಾಯ ವ್ಯವಸ್ಥೆ ಮಾಡಲು ತೀರ್ಮಾನಿಸಲಾಯಿತು**

**ವಿಷಯ ಸಂಖ್ಯೆ : 46:17**

**ವಿಷಯ : ವಿಶ್ವವಿದ್ಯಾನಿಲಯದಲ್ಲಿ ಕೌಶಲ್ಯಾಭಿವೃದ್ಧಿ ತರಬೇತಿ ಯೋಜನೆಯನ್ನು ಅನುಷ್ಠಾನಗೊಳಿಸುವ ಬಗ್ಗೆ.**

ಭಾರತ ಸರ್ಕಾರ, ವಿಶ್ವವಿದ್ಯಾನಿಲಯ ಧನಸಹಾಯ ಆಯೋಗ ಮತ್ತು ಕರ್ನಾಟಕ ರಾಜ್ಯ ಸರ್ಕಾರ ಕೌಶಲ್ಯಾಭಿವೃದ್ಧಿ ಯೋಜನೆಗಳ ಅನುಷ್ಠಾನಕ್ಕಾಗಿ ವಿಶೇಷ ಮಹತ್ವವನ್ನು ನೀಡಿರುತ್ತದೆ. ಈ ಯೋಜನೆಗಳನ್ನು ವಿಶ್ವವಿದ್ಯಾನಿಲಯದಲ್ಲಿಯೂ ಅನುಷ್ಠಾನಗೊಳಿಸಬೇಕೆಂಬುದು ಭಾರತ ಸರ್ಕಾರ, ವಿಶ್ವವಿದ್ಯಾನಿಲಯ ಧನಸಹಾಯ ಆಯೋಗ ಮತ್ತು ರಾಜ್ಯ ಸರ್ಕಾರಗಳ ಅಪೇಕ್ಷೆಯಾಗಿರುತ್ತದೆ.

ವಿದ್ಯಾರ್ಥಿಗಳು ಕೇವಲ ಪಠ್ಯ ಸಂಬಂಧಿತ ವಿಷಯಗಳಲ್ಲಿ ಪರಿಣಿತಿಯನ್ನು ಪಡೆದರೆ ಮಾತ್ರ ಸಾಲದು, ಅದಕ್ಕೆ ಪೂರಕವಾಗಿ ತಮಗೆ ಸಂಬಂಧಿಸಿದ ವಿಷಯಗಳಲ್ಲಿ ಅಥವಾ ವಿದ್ಯಾರ್ಥಿಗಳಲ್ಲಿರುವ ಗುಪ್ತ ಪ್ರತಿಭೆಗಳನ್ನು ಗುರುತಿಸಿ, ಅವರುಗಳಿಗೆ ಅಗತ್ಯ ಮಾರ್ಗದರ್ಶನ ನೀಡುವುದರಿಂದ ರಾಷ್ಟ್ರದ ಅಭಿವೃದ್ಧಿಗೆ ಪೂರಕವಾಗುತ್ತದೆಂಬುದು ನಿರ್ವಿವಾದವಾದ ಸಿದ್ಧಾಂತವಾಗಿರುತ್ತದೆ. ವಿಶ್ವವಿದ್ಯಾನಿಲಯದಲ್ಲಿ ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆಯ ದೃಷ್ಟಿಯಿಂದ ಕೌಶಲ್ಯಾಭಿವೃದ್ಧಿ ತರಬೇತಿಯನ್ನು ಕಡ್ಡಾಯವಾಗಿ ಎಲ್ಲಾ ವಿದ್ಯಾರ್ಥಿಗಳಿಗೆ ನೀಡಲು ಉದ್ದೇಶಿಸಲಾಗಿದೆ. ಈ ಸಂಬಂಧ, ಡಾ॥ ತೇಜಸ್ವಿ ನವಿಲೂರು ಇವರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಿದ್ದು, ಸಮಿತಿಯು ಕೆಲವು ವಿಷಯಗಳಲ್ಲಿ ಕೌಶಲ್ಯಾಭಿವೃದ್ಧಿ ತರಬೇತಿಯನ್ನು ನೀಡಲು ಶಿಫಾರಸ್ಸು ಮಾಡಿರುತ್ತದೆ. ಸದರಿ ಸಮಿತಿಯು ಮಾಡಿರುವ ಕೌಶಲ್ಯಾಭಿವೃದ್ಧಿ ವಿಷಯಗಳ ಶಿಫಾರಸ್ಸುಗಳು ಈ ಕೆಳಕಂಡಂತೆ ಇರುತ್ತವೆ.

(1) Basic of Computer Networking
(2) Computer Fundamentals
(3) Multimedia

20/7/18

**ಕುಲಸಚಿವರು**

20/7

**ಕುಲಪತಿಗಳು**

(4) Web Designing
(5) Desk Top Publishing
(6) English for Communication and Soft Skills
(7) ಆಡಳಿತ ಕನ್ನಡ

ಮೇಲ್ಕಂಡ ಕೌಶಲ್ಯಾಭಿವೃದ್ಧಿ ತರಬೇತಿಯು ಯಾವುದೇ ಪರೀಕ್ಷೆಯನ್ನು ಒಳಗೊಂಡಿರುವುದಿಲ್ಲ. ಆದರೆ, ಪ್ರತಿಯೊಬ್ಬ ವಿದ್ಯಾರ್ಥಿಗೂ ತರಬೇತಿಯಲ್ಲಿ ಭಾಗವಹಿಸಿದ್ದರ ಬಗ್ಗೆ ಪ್ರಮಾಣ ಪತ್ರವನ್ನು ನೀಡಲಾಗುವುದು. ಸದರಿ ಕೌಶಲ್ಯಾಭಿವೃದ್ಧಿ ವಿಷಯಗಳಿಗೆ ಸಂಬಂಧಿಸಿದಂತೆ, ಪಠ್ಯ ಕ್ರಮವನ್ನು ರಚಿಸಿ, ಶೈಕ್ಷಣಿಕ ಮಂಡಳಿಯ ಅನುಮೋದನೆಗಾಗಿ ವಿಷಯವನ್ನು ಮಂಡಿಸಲಾಗಿದೆ.

**<u>ತೀರ್ಮಾನ:</u> ಭಾರತ ಸರ್ಕಾರ, ಯು.ಜಿ.ಸಿ, ಕರ್ನಾಟಕ ಸರ್ಕಾರ ನೀಡಿರುವ ಸೂಚನೆಯಂತೆ ವಿಶ್ವವಿದ್ಯಾನಿಲಯದಲ್ಲಿ ಕೌಶಲ್ಯ ಅಭಿವೃದ್ಧಿ ಯೋಜನೆಯನ್ನು ಅಳವಡಿಸಿಕೊಳ್ಳುವ ಬಗ್ಗೆ ಚರ್ಚೆಯಾಯಿತು. ಈ ಬಗ್ಗೆ ತರಬೇತಿಗಾಗಿ ಕೆಲವು ವಿಷಯವನ್ನು ನಿಗಧಿಪಡಿಸಿ ನೀಡುವಂತೆ ಸಮಿತಿ ರಚಿಸಲಾಗಿತ್ತು. ಆ ಸಮಿತಿಯು ಶಿಫಾರಸ್ಸು ಮಾಡಿದ 07 ವಿಷಯಗಳನ್ನು ಅಳವಡಿಸಿ ಅನುಷ್ಠಾನಗೊಳಿಸಲು ತಾತ್ವಿಕ ಒಪ್ಪಿಗೆ ನೀಡಲಾಯಿತು. ಈ ಬಗ್ಗೆ ಪಠ್ಯ ಕ್ರಮ ರಚನೆಯಾಗಿದ್ದು ಅಗತ್ಯ ತರಬೇತಿ ನೀಡಿ ಪ್ರಮಾಣ ಪತ್ರ ನೀಡುವ ಬಗ್ಗೆ ಚರ್ಚಿಸಿ ಅಗತ್ಯ ಮಾರ್ಪಾಡು ಮಾಡಿಕೊಂಡು ಅನುಷ್ಠಾನಗೊಳಿಸಲು ತೀರ್ಮಾನವಾಯಿತು.**

ಅಧ್ಯಕ್ಷರ ಅಪ್ಪಣೆ ಮೇರೆಗೆ ಮಂಡಿಸಲಾದ ಇತರೆ ವಿಷಯಗಳು.

**ವಿಷಯ ಸಂಖ್ಯೆ : 46:18**

ವಿಶ್ವವಿದ್ಯಾನಿಲಯ ನೀಡಿರುವ ವಿವಿಧ ಕೋರ್ಸ್‌ಗಳ ಅಂಕಪಟ್ಟಿಗಳಿಗೆ ನೈಜತೆ ದೃಢೀಕರಣ (Genuine Certificate) ಪ್ರಮಾಣ ಪತ್ರ ನೀಡುವ ಬಗ್ಗೆ.

ಕುಲಸಚಿವರ (ಪರೀಕ್ಷಾಂಗ) ಇವರು ನೈಜತೆ ಪ್ರಮಾಣ ಪತ್ರವನ್ನು ನೀಡುವ ವಿಷಯವನ್ನು ಮಂಡಿಸಿ ಸದರಿ ಪ್ರಮಾಣ ಪತ್ರವನ್ನು ನೀಡಲು ಈಗ ಅನುಸರಿಸುತ್ತಿರುವ ಕಾರ್ಯವಿಧಾನದಲ್ಲಿರುವ ಕೆಲವು ಸಣ್ಣ ಪುಟ್ಟ ನ್ಯೂನ್ಯತೆಗಳನ್ನು ಸಭೆಯ ಗಮನಕ್ಕೆ ತಂದರು.

**ತೀರ್ಮಾನ: ಈ ಬಗ್ಗೆ ಚರ್ಚಿಸಿದ ಸಭೆಯು ಪರೀಕ್ಷಾ ವಿಭಾಗದಲ್ಲಿ 1996 ರಿಂದಲೂ ಲೆಡ್ಜರ್‌ನ್ನು ಆಧಾರವಾಗಿಟ್ಟುಕೊಂಡು ನೈಜತೆ ಪ್ರಮಾಣ ಪತ್ರವನ್ನು ನೀಡಲಾಗುತ್ತಿರುವುದನ್ನು ಗಮನಿಸಿದ ಸಭೆಯು ಅದರ ಜೊತೆಗೆ ಪ್ರವೇಶಾತಿಯ ಅನುಮೋದನೆಯನ್ನು ಪರಿಶೀಲಿಸಿ ತಕ್ಷಣದಿಂದ ನಿಯಮಾನುಸಾರ ನೈಜತೆ ಪ್ರಮಾಣ ಪತ್ರದ ಅರ್ಜಿಯನ್ನು ಪರಿಶೀಲಿಸಿ, ನೈಜತೆ ಪ್ರಮಾಣ ಪತ್ರವನ್ನು ನೀಡುವಂತೆ ನಿರ್ಣಯಿಸಲಾಯಿತು.**

ಅಂತಿಮವಾಗಿ 46 ನೇ ಶೈಕ್ಷಣಿಕ ಮಂಡಳಿ ಸಭೆಗೆ ಆಗಮಿಸಿ ಮಂಡಿತ ವಿಷಯಗಳ ಬಗ್ಗೆ ಚರ್ಚಿಸಿ, ತಮ್ಮ ಅಮೂಲ್ಯ ಸಲಹೆ, ಸೂಚನೆಗಳನ್ನು ನೀಡಿ, ಸಭೆಯನ್ನು ಸೂಸೂತ್ರವಾಗಿ ನಡೆಸಿಕೊಟ್ಟಿದ್ದಕ್ಕೆ ಎಲ್ಲ ಸದಸ್ಯರುಗಳಿಗೂ ಮಾನ್ಯ ಕುಲಪತಿಗಳು ಧನ್ಯವಾದಗಳನ್ನು ತಿಳಿಸುವುದರೊಂದಿಗೆ ಸಭೆಯು ಮುಕ್ತಾಯಗೊಂಡಿತು.

20/7/18

**ಕುಲಸಚಿವರು ಹಾಗೂ**
**ಸದಸ್ಯ ಕಾರ್ಯದರ್ಶಿಗಳು**

**ಕುಲಸಚಿವರು**

20/7

**ಕುಲಪತಿಗಳು ಹಾಗೂ**
**ಅಧ್ಯಕ್ಷರು**

**ಕುಲಪತಿಗಳು**